INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -1, May-June, 2022,
PageNo,75-86
Peer Reviewed Journal, Referred Journal

# ಮಹಾಗುರು ಬುದ್ಧರ ತಾತ್ವಿಕ ಪಥ ಕುರಿತ ವಿಶ್ಲೇಷಣೆ

**ಡಾ.ಕಾಳಸ್ವಾಮಿ.ಹೆಚ್.ಎನ್**[1]

ಭಾರತ ದೇಶ ಬಹುಧರ್ಮ, ಬಹುಸಂಸ್ಕೃತಿ, ಬಹುಜಾತಿಗಳ ನೆಲೆಬೀಡಾಗಿ ಸಾವಿರಾರು ವರ್ಷಗಳಿಂದಲೂ ಉಳಿದು-ಬೆಳೆದು ಬರುತ್ತಿರುವುದನ್ನು ಕಾಣುತ್ತೇವೆ. ಇಲ್ಲಿಯ ಬೌದ್ಧ, ಜೈನ, ಹಿಂದೂ, ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳು ಕೂಡಿ ಬಾಳುತ್ತಿದ್ದು, ಭಾರತೀಯ ಸಂಸ್ಕೃತಿ ಹಾಗೂ ಐತಿಹಾಸಿಕ ಪರಂಪರೆಗೆ ಅಪಾರವಾದ ಕೊಡುಗೆಯನ್ನು ನೀಡುತ್ತಾ ಬಂದಿವೆ. ಎಲ್ಲ ಧರ್ಮಗಳ ಮೂಲ ಆಶಯ ಸರ್ವಜೀವಿಗಳ ಹಿತ ಮತ್ತು ಸುಖವನ್ನು ಬಯಸುವುದು. ಹಾಗಾ ದಾಗಲೇ ಧರ್ಮ ಎನ್ನುವುದಕ್ಕೆ ನಿಜವಾದ ಬೆಲೆ ಬರುವುದು. ಅಂತಹ ಬೆಲೆಬಾಳುವ ಗೌರವವನ್ನು ಪಡೆದವುಗಳಲ್ಲಿ ಬೌದ್ಧ ಧರ್ಮವು ಪ್ರಮುಖವಾದುದು.

ಸರ್ವಜೀವ ದಯಾಪರವಾದ ಧರ್ಮದ ಸಂಸ್ಥಾಪಕ ಗೌತಮ ಬುದ್ಧ, ಕ್ರಿ.ಶ.ಪೂ. ಆರನೆಯ ಶತಮಾನದಲ್ಲಿ ಬಾಳ ಬದುಕಿದವನು. ಈತನ ಜನನ ಪೂರ್ವ ಕಾಲದಲ್ಲಿಯೂ ಭಾರತ ದಲ್ಲಿ ಅನೇಕ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ದಾರ್ಶನಿಕ ಚಿಂತಕರು ಆಗಿ ಹೋಗಿದ್ದಾರೆ. ಅಂತಹವರ ವಿಚಾರ-ಚಿಂತನೆಗಳು ಬುದ್ಧನ ಜೀವನದ ಮೇಲೆ ವಿಶೇಷವಾದ ಪ್ರಭಾವ ಬೀರಿದ್ದವೆನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ. ಇತಿಹಾಸಪೂರ್ವ ಕಾಲದಲ್ಲಿ ಪ್ರಕೃತಿಯ ವಿಭಿನ್ನ ಹಾಗೂ ವಿಶಿಷ್ಟ ಶಕ್ತಿಗಳನ್ನು ನಂಬಿ ಆರಾಧಿಸುತ್ತಿದ್ದರು ಎನ್ನುವುದನ್ನು ಋಗ್ವೇದದ ಅಧ್ಯಯನದಿಂದ ಕಂಡು ಕೊಳ್ಳಬಹುದಾಗಿದೆ. ಆರಂಭದಲ್ಲಿ ನೈತಿಕ ನಿಯಂತ್ರಕನು 'ವರುಣ' ದೇವನು ನಂತರದಲ್ಲಿ ಆ ಸ್ಥಾನವನ್ನು 'ಇಂದ್ರ' ದೇವನು ಪಡೆದುಕೊಂಡಂತಿದೆ. ಇನ್ನಿತರ ದೇವತೆಗಳಾದ ಅಗ್ನಿ ಮತ್ತು ಸೋಮ ಪ್ರಮುಖರಾಗಿ ಕಂಡು ಬರುತ್ತಾರೆ. ಆ ಜನವರ್ಗವೇ ನಾನಾ ಕಾರಣಗಳಿಂದ ಸೃಷ್ಟಿಸಿ ಕೊಂಡಿದ್ದ ಇಂತಹ ದೇವುರುಗಳಲ್ಲಿ ಕೆಲವೊಮ್ಮೆ ಒಬ್ಬನೇ ದೇವರನ್ನು ಸರ್ವಶ್ರೇಷ್ಠ ಎಂದು ನಂಬಿ ಪೂಜಿಸಿ ದ್ದನ್ನು ನಾವು ಕಾಣಬಹುದು. ಇಂತಹ ಉಪಾಸನಾ ಕ್ರಮವನ್ನು "ಏಕದೇವೋಪಾಸನ" ಎನ್ನಲಾಗು ತ್ತದೆ. ಜನರು ತಾವು ಯಾವು ಯಾವುದೋ ಕಾರಣದಿಂದ ರೂಪಿಸಿದ ದೇವತೆಗಳನ್ನು ಸಮಾ ಧಾನಿಸಬೇಕಾಗಿ ಬಂದಾಗ ಯಜ್ಞ-ಯಾಗಗಳನ್ನು ಆರಂಭಿಸಿದರು.

ಯಜ್ಞ-ಯಾಗಗಳು ಆಚರಣೆಗೆ ಬರುತ್ತ ತುಂಬ ಕೌಶಲ್ಯತೆಯನ್ನು ಪಡೆದುಕೊಂಡವು, ಹಾಲು, ತುಪ್ಪ, ಸೋಮರಸ, ವಿಶೇಷವಾದ ಆಹಾರಧಾನ್ಯ, ಮಾಸ ಇತ್ಯಾದಿಗಳನ್ನು ದೇವತೆಗಳ ತೃಪ್ತಿಗಾಗಿ ಅರ್ಪಿಸುವುದು ಆರಂಭವಾಯಿತು. ಇದಕ್ಕೆ ಸಂಬಂಧಿಸಿದ ಮಂತ್ರ-ತಂತ್ರಗಳು, ತತ್ವಸಿ ದ್ಧಾಂತಗಳು ಜಟಿಲವಾಗತೊಡಗಿದ್ದವು. ಒಂದು ಹಂತದಲ್ಲಿ ದೇವತೆಗಳಿಗಿಂತ ಯಜ್ಞ-ಯಾಗಾದಿಗಳೇ ಮೋಕ್ಷಕ್ಕೆ ಮಾರ್ಗ ಎಂಬಂತಾಯಿತು. ಇದರಿಂದ ಬರುಬರುತ್ತ ಧರ್ಮವೆಂಬುದು ಕಠಿಣವಾದ ಕಗ್ಗಂಟಾಗುತ್ತ ಸಾಗಿತು. ಇಂತಹ ಕಾಲ ಸಂದರ್ಭದಲ್ಲಿ ಬುದ್ಧನ ಜನನವಾಯಿತು.

ಬುದ್ಧನ ಸಮಕಾಲೀನ ಸಂದರ್ಭದಲ್ಲಿ ಪ್ರಜಾಗಣರಾಜ್ಯ ವ್ಯವಸ್ಥೆಯು ಅವಸಾನದತ್ತ ಸಾಗುತಿತ್ತು. ಏಕಸತ್ತಾಕ ರಾಜ್ಯ ವ್ಯವಸ್ಥೆ ಗಟ್ಟಿಗೊಳ್ಳುತ್ತಿತ್ತು. ಆಗಲೂ ಪ್ರಜಾಧಿಪತ್ಯದ ರಾಜ್ಯಗಳು ಕೆಲವುನ್ಯಾಯಯುತ ಆಡಳಿತವನ್ನು ನಡೆಸುತ್ತಿದ್ದವು ಎನ್ನುವುದಕ್ಕೆ ಲಿಚ್ಛವಿಗಳು, ವಜ್ಜಿಯರು, ವಿದೇಹರು ಶಾಕ್ಯರು ಹಾಗೂ ಮೋರಿಯರುಗಳನ್ನು ಹೆಸರಿಸಬಹುದು. ಅಲ್ಲಿ ಆಡಳಿತಾತ್ಮಕ ಹಾಗೂ ನ್ಯಾಯ ಸಂಬಂಧಿ ವಿಷಯಗಳನ್ನು ಸಾರ್ವಜನಿಕರ ಮುಂದೆಯೇ ಚರ್ಚಿಸಲಾಗುತಿತ್ತು. ಹೀಗೆ ಪ್ರಜಾಪ್ರಭುತ್ವದ ಸಂವಿಧಾನಕ್ಕೆ ಬೇಕೆ ಬೇಕಾದ ಎಲ್ಲ ಲಕ್ಷಣಗಳೂ ಈ ಪ್ರಜಾಧಿಪತ್ಯಗಳಲ್ಲಿ ಸಮಾ ವೇಶಗೊಂಡದ್ದನ್ನು

[1]. ಸಂಶೋಧನಾ ಸಹಾಯಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ನಾವು ಕಾಣಬಹುದು ಎಂಬುದನ್ನು ಅನವಟ್ಟಿಯವರು ತಮ್ಮ "ಪ್ರಾಚೀನ ಭಾರತ" ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಹೀಗೆ ಭಾರತ ದೇಶವನ್ನು ಕುರಿತು ತಿಳಿಯುವಾಗ ಬುದ್ಧ ಪೂರ್ವಕಾಲವನ್ನು ಗಮನಿಸುವುದು ಸೂಕ್ತ. ಈ ದೇಶದ ಚರಿತ್ರೆಯನ್ನು ಸರಿಯಾದ, ನಿಜವಾದ ಕ್ರಮದಲ್ಲಿ ಅಧ್ಯಯನ ಮಾಡಬೇಕಾದರೆ ಸರಿಯಾದ ಲಿಖಿತ ದಾಖಲೆಗಳ ಕೊರತೆ ಬಹುಮುಖ್ಯವಾಗಿ ಎದುರಾಗುತ್ತದೆ. ಆಗಲೇ ರಚನೆಗೊಂಡಿದ್ದ ವೈದಿಕ ಸಾಹಿತ್ಯ ಯಜ್ಞಯಾಗ, ಬಲಿ, ಮಾಟ–ಮಂತ್ರಗಳು, ಮೂಢನಂಬಿಕೆ–ಆಚರಣೆಗಳ ಆವರಣಕ್ಕೆ ಸಿಲುಕಿಕೊಳ್ಳಲು ಸಾಧ್ಯವಾಗಿದು. ಬುದ್ಧಪೂರ್ವಕಾಲದ ಇತಿಹಾಸವನ್ನು ಅಂದಿನ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ನೆಲೆಗಳನ್ನು ಒಂದಿಷ್ಟು ಅರಿತುಕೊಳ್ಳಲು ಆಧಾರವನ್ನೊದಗಿಸುವವು ಬುದ್ಧನ ಜಾತಕ ಕಥೆಗಳು ಎಂದು ಎನ್.ಮೆಹತಾ ಅವರ 'ಪ್ರಿ ಬುದ್ಧಿಸ್ಟ್ ಇಂಡಿಯಾ' ಎಂಬ ಕೃತಿಗೆ ಮುನ್ನುಡಿಯನ್ನು ಬರೆದಿರುವ ಎಚ್.ಹೆರಾಸ್ ಅವರ ಅಭಿಪ್ರಾಯ ಸೂಕ್ತವಾದದ್ದೆನಿಸುತ್ತದೆ.

ಬುದ್ಧನ ಜಾತಕ ಕಥೆಗಳಿಂದ ತಿಳಿದು ಬರುವಂತೆ ಚಾತುರ್ವರ್ಣ ವ್ಯವಸ್ಥೆ ಬಹಳಷ್ಟು ಗಟ್ಟಿಗೊಂಡಿತ್ತು. ಇದು ಸಮಂಜಸವಲ್ಲದ ಶ್ರಮವಿಭಜನೆಯನ್ನು ಆಧಾರವಾಗಿಟ್ಟುಕೊಂಡಿತ್ತು. ಭೂಸುರ ರೆನಿಸಿಕೊಂಡಿದ್ದ ಬ್ರಾಹ್ಮಣರಿಗೆ ಪೂರ್ಣ ಸಹಕಾರಿಯಾಗಿದ್ದು ವಿದ್ಯೆಯ ಒಡೆಯರಾಗಿ ಹುಟ್ಟಿಸಿದ್ದಾರೆ, ಉಳಿದವರು ಯುದ್ಧಕ್ಕೆ, ಭೂಮಿ ಉಳುವುದಕ್ಕೆ, ಇನ್ನುಳಿದವರು ವ್ಯಾಪಾರಕ್ಕೆ, ಮಿಕ್ಕವರನ್ನು ಮೇಲವರ ಸೇವೆ ಮಾಡಲಿಕ್ಕೆ ದೇವರು ಹುಟ್ಟಿಸಿದ ಎಂದು ಬಿಂಬಿಸುತ್ತಾ ಬರಲಾಗಿದೆ. ಜಗತ್ಸರ್ವಂದೈವಾಧೀನಃ ದೈವೋ ಮಂತ್ರಾಧೀನ, ಮಂತ್ರೋ ಬ್ರಾಹ್ಮಣಾಧೀನಃ ಬ್ರಾಹ್ಮಣೋ ಮಮ ದೇವತಾ ಎಂಬುದನ್ನು ಜನಮನದಲ್ಲಿ ಬಿತ್ತಲಾಯಿತು. ಹೀಗಿರುವುದರಿಂದ ಇಡೀ ಸಮಾಜದ ಮೇಲೆ ಬ್ರಾಹ್ಮಣರ ಹಿಡಿತ ಬಲಗೊಂಡಿತು ಎಂಬುದನ್ನು ಡಿ.ಡಿ. ಕೋಸಾಂಬಿ (೦ಟಿ ಖಟಿಜಣಡಿಚಜಣಙಟಿಣಾಟು ಣಂ ಣುಜ ಣಜುಥಿ ಡಿ ಖಟಿಜುಚಿಟಿ ಊಖಣಾಡಿಥಿ–1999) ಅವರ ಅಭಿಪ್ರಾಯಗಳಿಂದ ಅರಿಯ ಬಹುದಾಗಿದೆ. ಡಿ.ಡಿ. ಕೋಸಾಂಬಿ ಅವರು ಮುಂದುವರಿದು 'ಬ್ರಾಹ್ಮಣಿಜಂ ತನ್ನ ಅಗತ್ಯಕ್ಕಾಗಿ ಮೂಢನಂಬಿಕೆಗಳನ್ನು ರೂಢಿಗೆ ತರದೇಹೋಗಿದ್ದರೆ ಆದಿವಾಸಿ ಸಮಾಜ ಆಗ ಶಾಂತಿಯುತವಾಗಿ ಹೊಸ ರೂಪಡೆಯಲು ಸ್ವಾತಂತ್ರ್ಯ ಯುದ್ಧವಾಗಿ, ನಿಸ್ಸಹಾಯಕ ಗಲಾಮರಾಗಿ ಬದಲಾಗಲು ಸಾಧ್ಯ ವಿರುತ್ತಿರಲಿಲ್ಲ' ಎಂದು ಅಭಿಪ್ರಾಯಪಡುತ್ತಾರೆ. ಜಾತಕ ಕಥೆಗಳ ವಿವರಣೆಯನ್ನು ಗಮನಿಸುವುದಾದರೆ ಕ್ಷತ್ರಿಯನೆಂದರೆ ರಾಜ್ಯವನ್ನು ಆಳುವ ಅರಸ, ಆತನೊಟ್ಟಿಗೆ ಮಂತ್ರಿಗಳು, ಸಾಮಂತರು, ಸೈನ್ಯದ ಅನೇಕ ಜನರು ಎಂದು ತಿಳಿದುಬರುತ್ತದೆ. ಆರಂಭದಲ್ಲಿ ಕ್ಷತ್ರಿಯರು ಬ್ರಾಹ್ಮಣರ ಆಣತಿಯಂತೆಯೇ ನಡೆಯುತ್ತಿದ್ದರೂ ಕಾಲಾಂತರದಲ್ಲಿ ಅವರ ಸಿದ್ಧಾಂತಗಳಿಗೆ ಎದುರಾಗಿ ನಿಲ್ಲುವ, ಪ್ರತಿಸವಾಲನ್ನು ಹಾಕುವ ಗುಣ ಬೆಳೆಸಿಕೊಂಡರು ಎನ್ನುವುದಕ್ಕೆ ಗೌತಮ ಬುದ್ಧನೇ ಒಳ್ಳೆಯ ಸಾಕ್ಷಿ. ವೈಶ್ಯರೆನಿಸಿಕೊಂಡವರು ಮೂಲತಃ ಕೃಷಿಕರು, ಬ್ರಾಹ್ಮಣ ಹಾಗೂ ಕ್ಷತ್ರಿಯರಿಗಿಂತ ಕೆಳಗಿನವರು, ಶೂದ್ರರಿಗಿಂತ ಮೇಲಿನವರು ಎಂದು ಪರಿಗಣಿಸಲ್ಪಟ್ಟವರು. ಇವರು ವ್ಯಾಪಾರದಲ್ಲಿ ನೈಪುಣ್ಯ ಸಾಧಿಸಿದ್ದರಿಂದ ಬ್ರಾಹ್ಮಣ ಹಾಗೂ ಕ್ಷತ್ರಿಯರಿಗಿಂದ ನಾವು ಕೆಳಗಿನವರು ಎಂಬುದನ್ನು ಮರೆಯುವಷ್ಟು ಭ್ರಮಾಧೀನರಾದರು. ಈಗಾಗಲೇ ವ್ಯವಸ್ಥೆ ಗುರುತಿಸಿದ್ದ ಶೂದ್ರರು ತುಂಬ ಶ್ರಮ ಜೀವಿಗಳು. ಬಹುಸಂಖ್ಯೆಯ ಜನರಾಗಿದ್ದ ಇವರು ಉತ್ಪಾದನಾ ನೆಲೆಯಲ್ಲಿ ದುಡಿಯುವವರು. ಸ್ಥಿರವಾದ ಬದುಕಾಗಲೀ ಕುಟುಂಬ ಜೀವನವಾಗಲೀ ಇವರಿಗಿರದೆ ಬಹುಸಂಖ್ಯಾತರಾದ ಇವರು ಗುಲಾಮ ಬದುಕನ್ನು ಸಾಗಿಸಬೇಕಿತ್ತು. ಅರಣ್ಯವನ್ನು ಕಡಿದು ವ್ಯವಸಾಯಯೋಗ್ಯ ಭೂಮಿಯನ್ನು ಇವರು ಸಿದ್ಧಪಡಿಸಬೇಕಿತ್ತು. ಕ್ಷತ್ರಿಯರಿಗೆ ಹೆಚ್ಚಿನ ಭೂಭಾಗ ವಿಂಗಡಣೆಯಾಗುತ್ತಿದ್ದರಿಂದ ಆಡಳಿತ ಗಾರರೆನಿಸಿದವರು ಗುಲಾಮರನ್ನು ಪಶುವಿನಂತೆ ದುಡಿಸಿಕೊಳ್ಳುತ್ತಿದ್ದರು. ತಿನ್ನಲು ಆಹಾರ, ಇರಲು ಗುಡಿಸಲಿನಂತಹ ವಸತಿ ಕಲ್ಪಿಸುತ್ತಿದ್ದರು. ಕೆಲವು ಬಾರಿ ಗುಲಾಮರು ತಮ್ಮ ಯಜಮಾನನ ಬಾಗಿಲಲ್ಲಿ ವಾಸಿಸುತ್ತಿದ್ದರು.' ಇಂತಹ ಸಂದರ್ಭದಲ್ಲಿ ಗುಲಾಮರಾದವರು ತಮ್ಮದೇ ಆದ ಬದುಕೊಂದಿದೆ ಎಂಬುದನ್ನು ಮರೆತುಹೋಗಿದ್ದರು. ಈ ರೀತಿಯ ಚಾತುರ್ವರ್ಣ ವ್ಯವಸ್ಥೆಯಿಂದ ವೃತ್ತಿಗಳು ಬ್ರಾಹ್ಮಣ ಮತ್ತು ಕ್ಷತ್ರಿಯರಿಂದ ಶ್ರೇಷ್ಠ–ಕನಿಷ್ಠವೆಂದು ಕವಲೊಡೆದವು. ಶೂದ್ರ–ಚಾಂಡಾಲರೆನಿಸಿಕೊಂಡವರ ನೆರಳು ಕೂಡ ಮೇಲ್ವರ್ಗದವರಿಗೆ ಸೋಂಕಬಾರದೆಂಬ ಕಟ್ಟುನಿಟ್ಟಿನ ನಿಯಮ ಜಾರಿಯಾಯಿತು, ನೋಡಿದರೂ ಮೈಲಿಗೆಯಾಗುತ್ತೇವೆಂಬ

ಭಾವ ಬ್ರಾಹ್ಮಣರಲ್ಲಿ ಬೆಳೆದು ಬಿಟ್ಟಿತು. ಹೀಗಾಗಿ ಕನಿಷ್ಟರನ್ನು ಊರಿನ ಗಡಿ ಭಾಗದಲ್ಲಿ ದೂಡಲಾಯಿತು, ಸರಹದ್ದಿನೊಳಗೆ ವಾಸಿಸಲು ಅವಕಾಶವಿಲ್ಲದಂತೆ ಮಾಡಲಾಯಿತು.

ಬುದ್ಧ ಪೂರ್ವ ಕಾಲೀನ ಆರ್ಥಿಕ ಪರಿಸ್ಥಿತಿಯನ್ನು ಗಮನಿಸುವುದಾದರೆ ಬುದ್ಧನ ಜಾತಕ ಕಥೆಗಳನ್ನು ಗಮನಿಸುವುದು ಸೂಕ್ತ. ಅಲ್ಲಿ ಕಬ್ಬಿಣ, ಹಿತ್ತಾಳೆ, ಬೆಳ್ಳಿ, ಬಂಗಾರ ಮುಂತಾದ ಲೋಹಗಳ ಬಳಕೆಯ ಸಂಗತಿಯನ್ನು ಕಾಣಬಹುದು. ಮುತ್ತು, ರತ್ನ, ಹವಳಗಳ ಪ್ರಸ್ತಾಪವೂ ಅಲ್ಲದೆ. ಇದೆಲ್ಲ ಅಷ್ಟು ಶಾಸ್ತ್ರೀಯವಾಗಿ ಅಲ್ಲದಿದ್ದರೂ ಅವರದೇ ರೀತಿಯಲ್ಲಿ ಅಂದಿನ ಜನ ಬಳಸಿಕೊಳ್ಳುತ್ತಿದ್ದರು, ಇದಕ್ಕೆ ಗಣಿಗಾರಿಕೆಯೂ ಪೂರಕವಾಗಿತೆಂದು ತಿಳಿದುಬರುತ್ತದೆ. 'ಆರ್ಯರ ಆಗಮನಕ್ಕಿಂತ ಪೂರ್ವದಲ್ಲಿಯೇ ಭಾರತದಲ್ಲಿ ಸಾಕು ಪ್ರಾಣಿಗಳನ್ನು ಪಳಗಿಸಿ ಬಳಸುವುದು, ಹೈನು ಉತ್ಪಾದನೆ ಮಾಡುವುದೂ ಆರಂಭವಾಗಿತ್ತು. ಅಂದು ವಿಭಿನ್ನ ವೃತ್ತಿಗಳಲ್ಲಿ ಜನ ತೊಡಗಿ ತಮ್ಮ ಬೇಕು-ಬೇಡಗಳನ್ನು ಪೂರೈಸಿಕೊಳ್ಳುತ್ತಿದ್ದರು. ಹೀಗೆ ದೇಶದಲ್ಲಿ ಚಾತುರ್ವರ್ಣ, ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಅಸಮಾನತೆ, ಶೋಷಣೆ, ಕಂದಾಚಾರ, ಮೂಢನಂಬಿಕೆ ಯಜ್ಞ-ಯಾಗಾದಿಗಳ ವಿಜೃಂಭಿತ ಆಚರಣೆಗಳು ಕಟ್ಟುನಿಟ್ಟಾಗಿ ಜಾರಿಯಾಗುತ್ತಿದ್ದ ಕಾಲಸಂದರ್ಭದಲ್ಲಿ ಗೌತಮ ಬುದ್ಧನ ಜನನವಾಯಿತು. ಗೌತಮ ಬುದ್ಧ ಪ್ರಜಾಧಿಪತ್ಯದ ಆಡಳಿತವಿರುವ ರಾಜಗಳರ ಬೇಕೆಂದು ಅಚಲವಾದ ನಂಬಿಕೆಯುಳ್ಳವನಾಗಿದ್ದನು. ಅಚ್ಚವಿಗಳಿಗೆ ಉಪದೇಶ ಮಾಡುವಾಗ ಬುದ್ಧ 'ಸ್ವತಂತ್ರವಾದ ಸಂಘ, ಸಂಸ್ಥೆಗಳಲ್ಲಿ ದೃಢವಾದ ನಂಬಿಕೆ ನಿಮ್ಮಲ್ಲಿದ್ದರೆ ಯಾವದೇ ತೊಂದರೆ ನಿಮಗೆದುರಾಗದು, ಏನೇ ತೊಂದರೆಗಳು ಎದುರಾಗದಂತೆ ಆ ಸಂಘ-ಸಂಸ್ಥೆಗಳು ಮೇಲಿಂದ ಮೇಲೆ ಸಾರ್ವಜನಿಕ ಸಭೆಗಳನ್ನು ನಡೆಸಿ ಚರ್ಚಿಸಬೇಕು' ಎಂಬಂತಹ ಮಾತುಗಳನ್ನಾಡುತ್ತಿದ್ದನು ಎಂಬುದು ಬೌದ್ಧ ಸಾಹಿತ್ಯದ ಓದಿನಿಂದ ಕಂಡುಕೊಳ್ಳಲು ಸಾಧ್ಯವಿದೆ. ಕ್ರಿ.ಪೂ. ಆರನೆಯ ಶತಮಾನವು ಅನೇಕ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಸ್ಥಿತ್ಯಂತರಗಳನ್ನು ಕಂಡಿರುವಂತಹದ್ದು. ಈ ಕಾಲಸಂದರ್ಭದಲ್ಲಿ ಅನೇಕ ಧಾರ್ಮಿಕ ಮುಖಂಡರು ತಮ್ಮದೇ ಆದ ರೀತಿಯಲ್ಲಿ ಸಾಧನಾ ಪಥದಲ್ಲಿ ಕಾರ್ಯರತರಾಗಿದ್ದರು. ಅವರಲ್ಲಿ ಪೂರಣ ಕಸ್ಸಪ, ಮಕ್ಕಲಿ ಗೋಸಾಲ, ಅಜಿತಕೇಶಕಂಬಳ, ಪಕ್ಕುದ ಕಚ್ಚಾಯನ, ನಿಗ್ಗಂಠನಾಥಪುತ್ತ, ಸಂಜಯ ಬೇಲಟ್ಟಪುತ್ತ ಎಂಬ ಆರುಜನ ಸಾಧಕರನ್ನು ಇಲ್ಲಿ ಹೆಸರಿಸಬಹುದಾಗಿದೆ.3 ಹೀಗೆ ಈ ಆರುಜನ ಆಚಾರ್ಯರು ತಮ್ಮ ತಮ್ಮ ಅನುಭವದ ನೆಲೆಯ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತ ಬಂದರು. ಆದರೆ ಇವರ ತತ್ವಗಳಲ್ಲಿ ಮತಭೇದಗಳಿದ್ದವೆಂದು, ಅವರವರ ತತ್ವಸಿದ್ಧಾಂತಗಳಲ್ಲಿ ಅವರದೇ ನಿರ್ಧಿಷ್ಟ ನಿಲುವು ಇಲ್ಲದಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ. ಇಂತಹ ಸಂದಿಗ್ಧತೆಯ ಸಂದರ್ಭದಲ್ಲಿ ಗೌತಮ ಬುದ್ಧ ಜೀವಪರವಾದ, ದಯಾಪರವಾದ, ಸಮಾನತೆಯ ನೆಲೆಗಟ್ಟಿನಲ್ಲಿ ನಿಲ್ಲಬಲ್ಲ ತತ್ವ-ಸಿದ್ಧಾಂತಗಳನ್ನು ಪ್ರತಿಪಾದಿಸಿದನು.

ಭಾರತದ ಈಶಾನ್ಯ ನೆಲೆಯ ನೇಪಾಳದ ದಕ್ಷಿಣಕ್ಕೆ ಹಿಮಾಲಯದ ಅಡಿಯಲ್ಲಿರುವ ಸುಮಾರು ೨೦೦ ಚೌರಸ ಮೈಲು ವಿಸ್ತಾರವಾದ ಒಂದು ಸಣ್ಣ ರಾಜ್ಯವನ್ನು ಶಾಕ್ಯವಂಶದ ಶುದ್ಧೋಧನ ಎಂಬುದನ್ನು ಆಳುತ್ತಿದ್ದನು. ಆತನ ಗೋತ್ರನಾಮ ಗೋತಮ. ವಾರಣಾಸಿಯಿಂದ ಉತ್ತರಕ್ಕೆ ಸುಮಾರು 130 ಮೈಲಿ ಅಂತರದಲ್ಲಿಯ ರೋಹಿಣಿ ನದಿಯ ದಡದಲ್ಲಿರುವ ಕಪಿಲ ವಸ್ತುವು ಆತನ ರಾಜಧಾನಿಯಾಗಿತ್ತು. ಶುದ್ಧೋಧನನಿಗೆ ನೆರೆಯ ರಾಜ್ಯದ ಕೋಲಿಯ ವಂಶದ ರಾಜಪುತ್ರಿಯರಾದ ಮಾಯಾದೇವಿ ಹಾಗೂ ಪ್ರಜಾಪತಿಯರೆಂಬ ಅಕ್ಕತಂಗಿಯರು ಪತ್ನಿಯರಾಗಿದ್ದರು. ಬಹುದಿನಗಳವರೆಗೆ ಈ ದಮಪತಿಗಳಿಗೆ ಸಂತಾನವಾಗಿರಲಿಲ್ಲವಾದ್ದರಿಂದ ಬಹು ಚಿಂತಿತರಾಗಿದ್ದರು. ಹೀಗೆ ಕಾಲಕಳೆಯುತ್ತಿರುವಾಗ ಒಂದು ದಿನ ಪಟ್ಟಮಹಿಷಿಯಾದ ಮಾಯಾದೇವಿಯು ಗರ್ಭ ಧರಿಸುವುದಾಗಿ ಅರಸನಿಗೆ ತಿಳಿಸಿದಳು. ಆಗ ಅರಸನಿಗೆ ವರ್ಣಿಸಲಾಗದಂತಹ ಆನಂದವುಂಟಾಯಿತು. ಮಾಯಾದೇವಿಯು ಪ್ರಸವ ಸಮಯ ಹತ್ತಿರವಾದಂತೆ ತವರು ಮನೆಯಾದ ದೇವದಹಕ್ಕೆ ಹೋಗುವುದಾಗಿ, ಕಳಿಸಿಕೊಡಬೇಕಾಗಿ ವಿನಂತಿಸಿಕೊಂಡಳು. ಅದಕ್ಕೆ ಅರಸ ಒಪ್ಪಿಗೆ ನೀಡಿ ಸಕಲ ವ್ಯವಸ್ಥೆಯನ್ನು ಮಾಡಿ ತವರಿಗೆ ಕಳುಹಿಸಿದನು. ಮಾಯಾದೇವಿ ಹೊರಟು ಮಾರ್ಗಮಧ್ಯದಲ್ಲಿ ವಿಶ್ರಾಂತಿಗೆಂದು ಲುಂಬಿನಿ ವನದಲ್ಲಿ ಇಳಿದುಕೊಂಡಳು. ತುಂಬು ಹೂ ಮೊಗ್ಗೆಗಳಿಂದ ನಳನಳಿಸುತ್ತಿದ್ದ ಎರಡು ಸಾಲವೃಕ್ಷಗಳ ನೆರಳಿನಲ್ಲಿ ಗಂಡುಮಗುವಿಗೆ ಜನ್ಮ ನೀಡಿದಳು. ಅಂದು ವೈಶಾಖ ಶುದ್ಧ ಪೂರ್ಣಿಮೆ, ಕ್ರಿ.ಪೂ.623-4 ಎಂದು ಆ ಮಗುವಿನ ಜನನಕಾಲವನ್ನು ಗುರುತಿಸಬಹುದು. ದಿವ್ಯಜ್ಞಾನಿ ಎನಿಸಿಕೊಂಡಿದ್ದ ಅಸಿತಮುನಿ ಈ ಮಗುವಿನ ಜನನದ ಸುದ್ದಿ ತಿಳಿದು

ಅಲ್ಲಿಗೆ ಬಂದನು. ಮಗುವನ್ನು ಕಂಡು ದುಃಖಿಸಲು ಆರಂಭಿಸಿದನು. ಸುದ್ಧೋಧನ ರಾಜ ಇದನ್ನು ಕಂಡು ಆಳುವಿಕೆಗೆ ಕಾರಣವೇನೆಂದು ವಿಚಾರಿಸಿದನು. ಆಗ ಅಸಿತ ಮುನಿ 'ಈ ಮಗುವು ಮುಂದೆ ಬುದ್ಧನಾಗುವನು. ಈ ಲೋಕದ ಜನರ ದುಃಖ, ರೋಗ, ಮರಣಗಳಿಂದ ಬಿಡುಗಡೆಗೊಳಿ ಸುವನು. ಆದರೆ ಈತ ದೊಡ್ಡವನಾಗುವವರೆಗೆ ನಾನು ಜೀವಿಸಿರಲಾರೆ, ಈತನ ಉಪದೇಶವನ್ನು ಕೇಳುವ ಭಾಗ್ಯದಿಂದ ವಂಚಿತನಾಗುತ್ತೇನಲ್ಲ ಎಂದು ದುಃಖವಾಗುತ್ತಿದೆ' ಎಂದು ಹೇಳಿ ಕೆಲಕಾಲದ ನಂತರ ಹೊರಟುಹೋದನು. ತಂದೆ–ತಾಯಿ ಪರಿವಾರ ಸೇರಿ ಮಗುವಿಗೆ ಸಿದ್ಧಾರ್ಥ ಎಂದು ನಾಮಕರಣ ಮಾಡಿದರು. ರಾಜನಾದ ಶುದ್ಧೋಧನ ಶ್ರೇಷ್ಠಾತಿ ಶ್ರೇಷ್ಠರೆನಿಸಿದ ಜ್ಯೋತಿಷಿಗಳನ್ನು ಕರೆಸಿ ಮಗುವಿನ ಜಾತಕವನ್ನು ಪರಿಶೀಲಿಸಲು ತಿಳಿಸಿದಾಗ ಎಲ್ಲರೂ ಸ್ಥಬ್ಧರಾಗಿದ್ದರು. ಆಗ ಅವರಲ್ಲಿ ಒಬ್ಬ ತರುಣ ಜ್ಯೋತಿಷಿಯು 'ಇವನ ಭವಿಷ್ಯದೆದುರು ಎರಡು ಸಾಧ್ಯತೆಗಳಿವೆ: ಈತ ಮಹಾ ಸಾಮ್ರಾಟನಾಗುತ್ತಾನೆ. ಇಲ್ಲವೆ ಸರ್ವಸಂಗ ಪರಿತ್ಯಾಗ ಮಾಡಿ ಬುದ್ಧನಾಗುತ್ತಾನೆ. ಒಂದು ವೇಳೆ ಬುದ್ಧನಾದಲ್ಲಿ ಭಿಕ್ಷಾಟನೆ ಇವನ ವಿಧಿಯಾಗುತ್ತದೆ. ಭವಿಷ್ಯದಲ್ಲಿ ಇವನು ಚಕ್ರವರ್ತಿಯಾಗಿ ಜಗತ್ತನ್ನು ಆಳುವವನು. ಇಲ್ಲವೇ ಭಿಕ್ಷಾ ಪಾತ್ರೆಯನ್ನು ಹಿಡಿದು ಬೀದಿಯಲ್ಲಿ ಅಲೆಯುವವನು ಎಂದು ಹೇಳಿದನು. ಇದೆಲ್ಲವನ್ನು ಕೇಳಿ ತಿಳಿದುಕೊಂಡ ಅರಸ ಸುದ್ಧೋಧನ ಮಗ ಭಿಕ್ಷಾಟನೆ ಮಾಡುವುದನ್ನೇ ಆಯ್ಕೆ ಮಾಡಿಕೊಂಡರೆ ಅದನ್ನು ತಡೆಯುವುದು ಹೇಗೆಂದು ಚಿಂತಿತನಾದನು. ಯಾವುದೇ ಅಹಿತಕರ, ಅಪಶಕುನದ ಸನ್ನಿವೇಶಗಳು ತನ್ನ ಮಗನ ಅರಿವಿಗೆ ಬರದಂತೆ ನೋಡಿಕೊಳ್ಳಬೇಕೆಂದು ನಿರ್ಧರಿಸಿದನು. ಬೆಳೆಯುತ್ತಿದ್ದ ಕುವರನಿಗೆ ಸಕಲ ಜ್ಞಾನ, ಯುದ್ಧ ನೈಪುಣ್ಯಗಳನ್ನು ಸಂಪಾದಿಸಿಕೊಳ್ಳುವಂತೆ ವ್ಯವಸ್ಥೆ ಮಾಡಿದನು. ಯಾವ ಅಹಿತವೂ ಮಗನ ಅರಿವಿಗೆ ಬರಬಾರದೆಂದು ತುಂಬ ಎಚ್ಚರವಹಿಸಿದನು. 'ಋತುಮಾನಕ್ಕನುಗುಣವಾಗುವಂತೆ ಮೂರು ಮಹಲುಗಳನ್ನು ಕಟ್ಟಿಸಿ ಶೃಂಗರಿಸಿದನು. ಅಲ್ಲಿ ರೋಗರುಜಿನಗಳಿಗೆ ಪಕ್ಕಾದವರೂ, ಮುಪ್ಪಿನವರೂ ಕುಮಾರನ ಕಣ್ಣುಗಳಿಗೆ ಕಾಣದಂತೆ ಕಟ್ಟಿಟ್ಟು, ನಾಡಿನ ಕುಲಜರ ಮಕ್ಕಳನ್ನೇ ಅವನ ಜತೆಗೆ ಸೇರಿಸಿದನು. ಅಲ್ಲಿಯೇ ತನ್ನ ತನುಮನಗಳಿಗೆ ತಕ್ಕ ಅಭ್ಯಾಸಗಳನ್ನೆಲ್ಲ ಯೋಗ್ಯ ಗುರುಗಳಡಿಯಲ್ಲಿ ಕಲಿತನು' ಹೀಗೆ ಸಿದ್ಧಾರ್ಥನು ಬೆಳೆದು ಹದಿನಾರರ ಹರೆಯಕ್ಕೆ ಕಾಲಿರಿಸಿದನು. ಅರಸ ಶುದ್ಧೋಧನ ಪರಿವಾರದೊಂದಿಗೆ ಚರ್ಚಿಸಿ ವಿವಾಹ ನಿಶ್ಚಯಿಸಿದರು. ಬ್ಯಾಲದಿಂದಲೇ ತುಂಬ ಸೂಕ್ಷ್ಮ ಆಲೋ ಚಕನಾಗಿದ್ದ ಸಿದ್ಧಾರ್ಥ ರೈತರ, ಉದ್ಯೋಗಿಗಳ, ಕೈದಿಗಳಿಗೆ ವಿಧಿಸುತ್ತಿದ್ದ ಭಯಾನಕ ಶಿಕ್ಷೆಗಳ ಕುರಿತು, ಅಕ್ಕ ಪಕ್ಕದ ದೇಶಗಳನ್ನು ಕಬಳಿಸುವ ಹುನ್ನಾರದಲ್ಲಿರುವ ಅರಸರ ನಡೆಯ ಕುರಿತು ತಿಳಿದುಕೊಂಡಿದ್ದನು. ಆಗ ಪ್ರಭುಗಳು ಪ್ರಜೆಗಳಿಗೆ 'ಕೊರಡಿನಿಂದ ಹೊಡೆಯುವುದು, ಕಾಲು ಕಡಿಯುವುದು, ಮೂಗು, ಕಿವಿ ಕತ್ತರಿಸುವುದು, ಮಳ್ಳುವ ಎಣ್ಣೆಯನ್ನು ಮೈಮೇಲೆರ ಚುವುದು, ನಾಯಿಗಳನ್ನು ಛೂಬಿಟ್ಟು ಸಾಯಿಸುವುದು, ಪ್ರಾಣಯಿರುವಾಗಲೇ ಶಿಲುಬೆಗೇರಿಸುವುದು, ತಲೆ ಕತ್ತರಿಸುವುದು ಮುಂತಾದ ಶಿಕ್ಷವಿಧಿಸುತ್ತಿದ್ದರು' ಎಂದು ಕಂಚ ಐಲಯ್ಯ ಅವರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. ಈಗಾಗಲೇ ಕಂಡುಕೊಂಡಂತೆ ಸಿದ್ಧಾರ್ಥನ ತಂದೆ–ತಾಯಿಯರು ಚಿಂತಿಸಿದಂತೆ ನೆರೆಯ ಕೋಲಿಯ ರಾಜ್ಯದ ದಂಡಪಾಣಿಯ ಮಗಳನ್ನು ಆಯ್ಕೆಮಾಡಿ ಸಿದ್ಧಾರ್ಥನ ಮದುವೆ ನೆರವೇರಿಸಿದರು. ಕೆಲವು ದಿನಗಳಕಾಲ ಸಿದ್ಧಾರ್ಥನು ಸಾಂಸಾರಿಕ ಬದುಕಿನಲ್ಲಿ ಸುಖವಾಗಿದ್ದನು.

ಮನುಷ್ಯ ಬದುಕಿನ ಬಾಲ್ಯ, ಮೌವ್ವನಗಳು ಅಶಾಸ್ವತ, ಮುಪ್ಪು, ನಂತರ ಸಾವು ಖಚಿತ ಎಂಬುದನ್ನು ಅರಿತುಕೊಂಡನು ಹೀಗಾಗಿ ಸಾಂಸಾರಿಕ ಜೀವನದ ಮೇಲಿನ ಮೋಹ ಕಡಿ ಮೆಯಾಗಹತ್ತಿತ್ತು. ಹೀಗಿರುವಾಗಲೇ ಶಾಕ್ಯ ಮತ್ತು ಕೋಲಿಯರ ಮಧ್ಯ ನೀರಿಗಾಗಿ ಕದನ ವೇರ್ಪಟ್ಟಿತು. ರೋಹಿಣಿ ನದಿಯ ನೀರಿನ ಬಳಕೆಯ ವಿಷಯವಾಗಿ ವಾದವೇರ್ಪಟ್ಟು ಯುದ್ಧದ ಹಂತಕ್ಕೆ ತಲುಪಿತ್ತು. ಶಾಕ್ಯಸಂಘ ಸಭೆ ಸೇರಿ ಕೋಲಿಯರ ಮೇಲೆ ಯುದ್ಧ ಮಾಡಬೇಕೆಂದು ತೀರ್ಮಾನಿಸಿದರು. ಇದಕ್ಕೆ ಸಿದ್ಧಾರ್ಥನ ಒಪ್ಪಿಗೆ ಇರಲಿಲ್ಲ. ಯುದ್ಧವು ಅನೇಕ ಜನರ ಕೊಲೆಗೆ ಕಾರಣವಾಗುತ್ತದೆ, ಯುದ್ಧ ಬೇಡ, ಮಾತುಕತೆಗಳಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಎಂದನು. ಸಂಘದ ಸದಸ್ಯರು ಇದಕ್ಕೊಪ್ಪದೆ ಯುದ್ಧದಿಂದಲೇ ಪರಿಹಾರಸಾಧ್ಯ ಎಂದರು ಅಷ್ಟೇ ಅಲ್ಲದೆ ಸಿದ್ಧಾರ್ಥನಿಗೆ ನೀನು ಯುದ್ಧದಲ್ಲಿ ನಮ್ಮೊಂದಿಗೆ ಇರದಿದ್ದರೆ ನಿಮ್ಮ ಕುಟುಂಬಕ್ಕೆ ಬಹಿಷ್ಕಾರ ಹಾಕಲಾಗುತ್ತದೆ. ಇಲ್ಲವೆ ಗಡಿಪಾರು ಮಾಡಲಾಗುತ್ತದೆ ಎಂದರು. ಈ ಕುರಿತು ಸಿದ್ಧಾರ್ಥ ಗಂಭೀರವಾಗಿ ಚಿಂತಿಸಿ ನಿರ್ಧಾರಕ್ಕೆ ಬಂದು 'ನೀವು ನಮ್ಮ ಕುಟುಂಬಕ್ಕೆ ಬಹಿಷ್ಕಾರ ಹಾಕುವುದು ಬೇಡ, ನಾನೇ ರಾಜ್ಯವನ್ನು ತ್ಯಜಿಸಿ ಹೊರಟು

ಹೋಗುತ್ತೇನೆ' ಎಂದು ಪ್ರಕಟಿಸಿದನು. ಸಭೆಯಲ್ಲಿ ನಡೆದದ್ದೆಲ್ಲವನ್ನು ತಂದೆ ಹಾಗೂ ಪತ್ನಿ ಯಶೋಧರೆಯನ್ನು ಕಂಡು ವಿವರಿಸಿದನು. ತಂದೆ–ತಾಯಿ, ಹೆಂಡತಿ ದುಃಖಿತರಾದರು. ಅವರೆಲ್ಲರಿಗೂ ಸಮಾಧಾನ ಹೇಳಿ ಸಿದ್ಧಾರ್ಥನು ಅರಮನೆಯನ್ನು ತೊರೆದನು' ಆಗಲೇ ಯಶೋಧರೆಗೆ ಮಗುವು ಜನಿಸಿತು. ರಾಹುಲನೆಂದು ನಾಮಕರಣ ಮಾಡಲಾಯಿತು. ಹೆಚ್ಚು ವಿಚಾರಿಸುತ್ತಾ ಇದ್ದರೆ ಈ ಪ್ರಾಪಂಚಿಕ ಬಂಧನ ಗಟ್ಟಿಗೊಳ್ಳುತ್ತದೆ, ಸಕಲ ಜೀವಿಗಳಿಗೆ ಅಂಟಿಕೊಂಡಿರುವ ದುಃಖಕ್ಕೆ ಕಾರಣಗಳೇನು, ಪರಿಹಾರ ಹೇಗೆ ಎಂಬುದನ್ನು ಕಂಡುಕೊಳ್ಳಲು ಹೊರಡಲೇಬೇಕೆಂದು ತುಂಬ ವಿಶ್ವಾಸಿಕನಾದ ಚೆನ್ನನೊಂದಿಗೆ ಕಂಥಕ ಎಂಬ ಕುದುರೆಯನ್ನು ಹತ್ತಿ ಮನೆಯಿಂದ ಹೊರ ಹೊರಟನ್ನು. ಈ ಸಂದರ್ಭವನ್ನು ಕುರಿತು ಅತಿ ಸಣ್ಣ ವಯಸ್ಸಿನಲ್ಲಿಯೇ ಯೌವನ ಉಕ್ಕುವ ಪ್ರಾಯದಲ್ಲಿಯೇ ಆತ ಎಲ್ಲ ಸುಖಗಳನ್ನು ತ್ಯಜಿಸಿ ಹೊರಹೊರಟ, ತಂದೆ, ತಾಯಿಗಳ ಆಕಾಂಕ್ಷೆಗೆ ವಿರುದ್ಧ ವಾಗಿದ್ದರೂ, ಅವರು ಕಣ್ಣೀರಿಟ್ಟರೂ ಭಿಕ್ಷುಕನಾಗಿ ಬದಲಾದನು.

ಗೌತಮ ತಲೆಗೂದಲನ್ನು ಗಡ್ಡ–ಮೀಸೆಗಳನ್ನು ತೆಗೆದು ಕಾಷಾಯ ವಸ್ತ್ರಗಳನ್ನುಟ್ಟು ಮನೆ ಮಾರು ಇಲ್ಲ ದವನಂತೆ ನಡೆದು ಬಿಟ್ಟ. ಹಾಗೆ ಹೋದಾಗಿನಿಂದಲೂ ಗೌತಮ ಅಶಾಂತಿಯಿಂದಲೇ ಅಲುಗಾಡಿದ. ಎಷ್ಟೋ ವರ್ಷಗಳಂದ ಆತನನ್ನು ಕಾಡುತಿದ್ದ ಸಮಸ್ಯೆಗಳ ಪರಿಹಾರ ಕುರಿತು ಅಲೋಚಿಸುತ್ತ ನಡೆದಾಡಿದ. ಮನೆ ಬಿಟ್ಟಾಗ ಆತನಿಗೆ 29 ವಯಸ್ಸು. ಆದರೂ ಆಗಾಗಲೇ ತನ್ನ ಸುತ್ತಣ ಪ್ರಜೆಗಳ ನೋವು ನಲಿವುಗಳ ಸಂಪೂರ್ಣ ಜ್ಞಾನ, ಮಾನಸಿಕ ಪರಿಣಿತಿ ಹೊಂದಿದವನು ಎಂದು ಓಲ್ಡನ್ ಬರ್ಗ್ ತನ್ನ *'ಃಣಜಜಝಚಿ: ಛ ಟಜಿಜ, ಛ ಜಥಿಣಡಿಟಿಜ, ಛ ಔಡಿಜಜಡಿ'* ಎಂಬ ಕೃತಿಯಲ್ಲಿ ಅಭಿಪ್ರಾಯಪಡುತ್ತಾನೆ. ಹೀಗೆ ಕಪಿಲವಸ್ತುವಿನಿಂದ ಹೊರಟ ಸಿದ್ಧಾರ್ಥ, ಚೆನ್ನ ಹಾಗೂ ಕಂಥಕ (ಕುದುರೆ)ರು ರಾಜ್ಯದ ಆಚೆಗಿರುವ ಅನೋಮ ನದಿಯ ದಡವನ್ನು ತಲುಪಿದರು. ಅಲ್ಲಿ ತನ್ನೆಲ್ಲ ಆಭರಣಗಳನ್ನು ಸಿದ್ಧಾರ್ಥ ಕಳಚಿ ಚೆನ್ನನ ಕೈಗಿತ್ತು ಕಂಥಕನೊಂದಿಗೆ ಅವನನ್ನು ಹಿಂತಿರುಗಲು ಹೇಳಿದನು. ಅಲ್ಲಿಂದ ಮುಂದುವರಿದು ರಾಜಗೃಹಕ್ಕೆ ಬಂದನು. ತುಂಬ ಬಲಶಾಲಿಯಾಗಿದ್ದ ಅರಸ ಬಿಂಬಸಾರ ಅಲ್ಲಿ ರಾಜ್ಯಭಾರ ಮಾಡುತ್ತಿದ್ದನು.

ಸಿದ್ಧಾರ್ಥ ಬಂದಿರುವ ವಿಷಯ ತಿಳಿದು ಅವನಿದ್ದಲ್ಲಿಗೆ ಬಂದು ಆದ ರಾತಿಥ್ಯವನ್ನು ನೆರವೇರಿಸಿ ದನು. ನಂತರ ವಿಚಾರಿಸಿ ರಾಜ್ಯವಾಳಬೇಕಾದವನು ಹೀಗೆ ಗೃಹತ್ಯಾಗ ಮಾಡುವುದು ಸೂಕ್ತವಲ್ಲ. ನಿನಗೆ ರಾಜಪುತ್ರನ ಯೋಗ್ಯತೆಗೆ ತಕ್ಕ ಹಾಗೆ ಇರಲು ವ್ಯವಸ್ಥೆ ಮಾಡುತ್ತೇನೆ ಎಂದು, ಊಟೋ ಪಚಾರದ ವ್ಯವಸ್ಥೆಯನ್ನು ಮಾಡಿಕೊಡುವುದಾಗಿ ಹೇಳಿದನು. ಆಗ ಸಿದ್ಧಾರ್ಥ ನನಗೆ ಸಾಧಿಸಬೇಕಾದದ್ದನ್ನು ಸಾಧಿಸುವವರೆಗೆ ಸಮಾಧಾನವಿಲ್ಲ, ಒಂದೇ ನೆಲೆಯಲ್ಲಿ ನಿಲ್ಲಲು ನನಗೆ ಸಾಧ್ಯವಿಲ್ಲ ಎಂದು ಬಿಂಬಿಸಾರನಿಗೆ ತಿಳಿಸಿದನು. ಎಲ್ಲೇ ಆತ ಹೋದರೂ ಜನ ಆತನನ್ನು ತುಂಬ ಗೌರವದಿಂದ ಕಾಣುತ್ತಿದ್ದರು, ಸತ್ಯ ಕಂಡುಕೊಳ್ಳುವ ಅತಿಯಾದ ಹಂಬಲವುಳ್ಳ ಸಿದಾರ್ಥ ಗುರುವನ್ನರಸಿ ತತ್ವಜ್ಞಾನಿಯೆನಿಸಿದ ಆಲಾರ ಕಾಲಾಮನಲ್ಲಿ ಶಿಷ್ಯನಾದನು. ಅವನೊಂದಿಗೆ ಚರ್ಚಿಸಿ ಅನೇಕ ವಿಷಯಗಳನ್ನು ಅರಿತುಕೊಂಡನು. ಆದರೂ ಇಹದ ದುಃಖವನ್ನು ಗೆಲ್ಲುವ, ಪುನರ್ಜನ್ಮದ ಕುರಿತ ಸರಿಯಾದ ಜ್ಞಾನ ಲಭಿಸದಿರುವುದರಿಂದ ಇನ್ನೊಬ್ಬ ಪ್ರಸಿದ್ಧ ತತ್ವಜ್ಞಾನಿ ರುದ್ರಕ ರಾಮನೆಂಬ ಗುರುವಿನಲ್ಲಿ ಶಿಷ್ಯತ್ವ ಸ್ವೀಕರಿಸಿದನು. ಅಲ್ಲಿಯೂ ಅನೇಕ ವಿಷಯಗಳನ್ನು ಅರ್ಥಮಾಡಿಕೊಂಡನು. ಆದರೆ ಆತನಿಗೆ ಬೇಕಾದ ವಿಷಯಕ್ಕೆ ಪರಿಹಾರ ಅಲ್ಲಿಯೂ ದೊರೆಯಲಿಲ್ಲ. ಅಲ್ಲಿಂದಲೂ ಸಿದ್ಧಾರ್ಥ ಹೊರಟ. ಎಲ್ಲಿಯೂ ಆತನಿಗೆ ಬೇಕಾದ ಮಾರ್ಗದರ್ಶನ ಲಭಿಸಲಿಲ್ಲ. ಹೀಗಿರುವುದರಿಂದ ಸಿದ್ಧಾರ್ಥ ಸ್ವತಃ ಯೋಗಮಾರ್ಗವನ್ನವಲಂಬಿಸಿ ತನಗೆ ಬೇಕಾದ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಉರುವೇಲಾ ಎಂಬಲ್ಲಿಗೆ ಹೊರಟು ಕಠೋರ ತಪಸ್ಸಿನಲ್ಲಿ ನಿರತನಾದನು.

ಅರಿವಿನ ಬೆಳಕನ್ನು ಪಡೆದೇ ತೀರಬೇಕೆಂದು ನಿಶ್ಚಯಿಸಿ ಬೋಧಿವೃಕ್ಷದಡಿಯಲ್ಲಿ ಕುಳಿತವನು ಅಲ್ಲಿಂದ ಕದಲಲಿಲ್ಲ. ಆಗ ಅನೇಕ ಮಾನಸಿಕ ಹಿಂಸೆಗಳು ಎದುರಾದವು. ಅದಾವುದಕ್ಕೂ ಸಿದ್ಧಾರ್ಥ ಎದೆಗುಂದಲಿಲ್ಲ, ಧ್ಯಾನಮಗ್ನನಾಗಿದ್ದ ಆತನು ಬಯಸಿದ ಸತ್ಯಜ್ಞಾನದ ಪ್ರಾಪ್ತಿಯಾಯಿತು. ಆ ರಾತ್ರಿಯ ಪ್ರಥಮ ಜಾವದಲ್ಲಿ ಹಿಂದಿನ ಜನ್ಮಗಳ ನೆನಪಾಯಿತು. ಎರಡನೆಯ ಜಾವದಲ್ಲಿ ಜಗತ್ತಿನ ಸ್ಥಿತಿ–ಲಯದ ಕುರಿತು ತಿಳಿಯಿತು. ಮೂರನೆಯ ಜಾವದಲ್ಲಿ ಕಾರ್ಯಕಾರಣಗಳ ಸ್ವರೂಪದ ಅರಿವಾಯಿತು. ಸೂರ್ಯೋದಯದ ಗಳಿಗೆಯಲ್ಲಿ ಪರಿಪೂರ್ಣ ಜ್ಞಾನ ಪ್ರಾಪ್ತಿಯಾಯಿತು, ಬುದ್ಧನಾದನು, ಹೀಗೆ ಪಡೆದ

ಜ್ಞಾನದ ಕುರಿತು ಚಿಂತಿಸುತ್ತ ಏಳು ವಾರಗಳ ಕಾಲ ಆ ಬೋಧಿವೃಕ್ಷದಡಿಯಲ್ಲಿ ಕುಳಿತೇ ಇದ್ದನು. ಆಗ ಉರುವೇಲಾದ ಸುಜಾತಾ ಎಂಬ ಹೆಣ್ಣು ಮಗಳು ಎಂದಿನಂತೆ ಅಲ್ಲಿಗೆ ಪಾಯಸದೊಂದಿಗೆ ಬಂದಿದ್ದಳು, ಬುದ್ಧನನ್ನು ಕಂಡು ತಾನು ತಂದ ಪಾಯಸವನ್ನು ನೀಡಿದ್ದಳು. ಹೀಗೆ ಸಿದ್ದಾರ್ಥನಿಗೆ ಜ್ಞಾನೋದಯವಾದದ್ದು ವೈಶಾಖ ಶುದ್ಧ ಪೂರ್ಣಿಮೆ ಎಂದು ನಂಬಿಕೆಗಳಿವೆ. ಹೀಗೆ ತುಂಬ ಕಷ್ಟಪಟ್ಟು ತನ್ನರಿವಿಗೆ ತಂದುಕೊಂಡ ಜೀವನಸತ್ಯದ ತತ್ವಗಳನ್ನು ಜನರಿಗೆ ತಲುಪಿಸಬೇಕೆಂದು ಹೊರಟನು. ಆಗ ಬುದ್ಧನಿಗೆ ಮೊದಲು ನೆನಪಾದವರು ಆರಂಭದಲ್ಲಿಯ ಗುರುಗಳಾಗಿದ್ದ ಆಲಾದ ಕಾಲಾಮ, ರುದ್ರಕರಾಮರು, ಆದಾಗಲೇ ಅವರು ತೀರಿ ಕೊಂಡಿದ್ದರು.

'ತನಗೆ ಶಿಷ್ಯರಾಗಿದ್ದ ಐವರು ತಪಶ್ವಿಗಳಿಗೆ ಬೋಧಿಸಬೇಕೆಂದು, ಅವರೆಲ್ಲಿರುವರೆಂಬುದನ್ನು ಶೋಧಿಸಿ, ವಾರಣಾಸಿಯ ಬಳಿಯಿರುವ ಋಷಿಪಟ್ಟಣಕ್ಕೆ ಹೋಗಿ, ತಾನು ಬುದ್ಧನಾಗಿರುವುದನ್ನು ಅವರಿಗೆ ಮನಗಾಣಿಸಿ ಧರ್ಮಚಕ್ರ ಪ್ರವರ್ತನ ಸೂತ್ರವನ್ನು ಬೋಧಿಸಿದನು. ಅವರು ಅವನ ಉಪದೇಶವನ್ನು ಸ್ವೀಕರಿಸಿ, ಅವನ ಶಿಷ್ಯರಾದರು' ಕಾಲಕಳೆದಂತೆ ನಿರಂತರ ಸಂಚಾರ, ಉಪದೇಶ ಕಾರ್ಯಗಳನ್ನು ಮುಂದುವರೆಸಿದಂತೆ ಅನೇಕ ಅರಸರು, ಶ್ರೀಮಂತರು ಬುದ್ಧನ ಶಿಷ್ಯತ್ವವನ್ನು ಸ್ವೀಕರಿಸಿದರು. ಈ ಕುರಿತಂತೆ ತಾಳ್ತಜೆ ವಸಂತಕುಮಾರ ಅವರು 'ಗೌತಮ ಬುದ್ಧನ ಮೊದಲ ಉಪದೇಶವಾದುದು ಕಾಶಿಯ ಮೃಗದಾವದಲ್ಲಿ. ಅಲ್ಲಿಯೇ ಮೊದಲಬಾರಿಗೆ ನಾಲ್ಕು ಆರ್ಯಸತ್ಯಗಳನ್ನು ಅಷ್ಟಾಂಗ ಮಾರ್ಗವನ್ನು ಬೋಧಿಸಿ ಐವರು ಬ್ರಾಹ್ಮಣರನ್ನು ತನ್ನ ಶಿಷ್ಯರಾಗಿ ಬೌದ್ಧಭಿಕ್ಕುಗಳಾಗಿ ಸ್ವೀಕರಿಸಿದನು. ಆ ಐವರಲ್ಲಿ ಕೊಂಡಞ (ಕೌಂಡಿನ್ಯ) ಎಂಬಾತನಿಗೆ ಆಗಲೇ ಬೋಧನೆಯಾಯಿತು. ವಪ್ಪ (ವಾಷ್ಟ)ನಿಗೆ ಮರುದಿನ ಹಾಗೂ ಇತರ ಮೂವರಾದ ಮಹಾನಾಮ, ಬಧ್ಧಿಯ (ಭದ್ರಿಕ) ಮತ್ತು ಅಸ್ಸಜಿ (ಅಶ್ವಜಿತ) ಇವರುಗಳಿಗೆ ಅನಂತರದ ಮೂರು ದಿನಗಳಲ್ಲಿ ಬೋಧೆಯಾಯಿತು. ಹೀಗೆ ಆ ಐವರು ಅರ್ಹತರಾದರು. ಅಲ್ಲಿಗೆ ಬುದ್ಧನೂ ಸೇರಿದಂತೆ ಆರು ಮಂದಿ 'ಮೊದಲ ಅರ್ಹತರು' ಎನಿಸಿದರು. ಅಲ್ಲಿಂದ ಮುಂದೆ ಈ ಬಗೆಯ ಪ್ರಚಾರಕಾರ್ಯ ಬಿರುಸಾಗಿಯೇ ಸಾಗಿತು ಎನ್ನಬಹುದು' ಎಂದು ಅಭಿಪ್ರಾಯ ಪಡುತ್ತಾರೆ. ಮುಂದೆ ಕೆಲದಿನಗಳ ನಂತರ ಸಂಜಯ ಬೇಲಟ್ಠಪುತ್ತನ ಶಿಷ್ಯರಾಗಿದ್ದ ಸಾರಿಪುತ್ರ, ಮೌದ್ಗಲ್ಯಾಯನರು ಗೌತಮ ಬುದ್ಧನ ಉಪದೇಶದಿಂದ ಪ್ರಭಾವಿತರಾಗಿ ಆತನಲ್ಲಿ ಶಿಷ್ಯತ್ವ ಸ್ವೀಕರಿಸಿದರು. ಆನಂದ, ಉಪಾಲಿ, ಶ್ರೀಮಂತನಾಗಿದ್ದ ಅನಾಥ ಪಿಂಡಕ, ವೇಶ್ಯಾವೃತ್ತಿಯಲ್ಲಿದ್ದ ಅಮ್ರಪಾಲಿ, ಕೊಲೆಗಡುಕನೆನಿಸಿದ್ದ ಅಂಗುಲಿಮಾಲಾರಂತಹ ವ್ಯಕ್ತಿಗಳೂ ಗೌತಮ ಬುದ್ಧನ ವ್ಯಕ್ತಿತ್ವ ಹಾಗೂ ಉಪದೇಶಗಳ ಪ್ರಭಾವದಿಂದ ತಮ್ಮನ್ನು ಪರಿವರ್ತಿಸಿಕೊಂಡು ಉತ್ತಮ ನಾಗರಿಕರಾಗಿ ಬೆಳೆದರು.

ಹೀಗೆ ಗೌತಮ ಬುದ್ಧ ಜ್ಞಾನೋದಯದ ನಂತರ ನಿರಂತರವಾಗಿ ಐದಾರು ವರ್ಷಗಳ ಕಾಲ ವಿಭಿನ್ನ ಗ್ರಾಮ, ನಗರ, ಪಟ್ಟಣಗಳಲ್ಲಿ ಸಂಚರಿಸಿ ಆಸಕ್ತರಿಗೆ ಧಮ್ಮೋಪದೇಶವನ್ನು ಮಾಡಿ ಸನ್ಮಾರ್ಗ ತೋರಿದನು. ಹೀಗಿರುವಾಗ ಅನೇಕ ಅರಸರು, ಮಂತ್ರಿಗಳು, ಕಾರ್ಮಿಕರು, ರೈತರು ಹೀಗೆ ಸಮಾಜದ ಅನ್ಯಾನ್ಯ ಸ್ತರ–ವೃತ್ತಿಯ ಜನ ಶಿಷ್ಯತ್ವ ಸ್ವೀಕರಿಸಿದ್ದರು. ಗೌತಮ ಬುದ್ಧನ ಪೂರ್ವ ಹಾಗೂ ಸಮಕಾಲೀನ ಸಂದರ್ಭದಲ್ಲಿ ಎರಡು ವಿಪರೀತ ಆಚರಣೆಗಳನ್ನು ಸಾಧಕರೆನಿಸಿಕೊಂಡವರು, ಅವರ ಅನುಯಾಯಿಗಳು ರೂಢಿಯಲ್ಲಿಟ್ಟು ಕೊಂಡಿದ್ದರು. ಒಂದು, ಅತಿಯಾದ ದೇಹದಂಡನೆ, ಇನ್ನೊಂದು ಅತಿಯಾದ ಶರೀರ ಮೋಹ. ತನ್ನ ಇಪ್ಪತ್ತೊಂಬತ್ತನೆಯ ವಯಸ್ಸಿನಲ್ಲಿ ಸಾಂಸಾರಿಕ ಬದುಕಿನಿಂದ ದೂರಾಗಿದ್ದ ಗೌತಮಬುದ್ಧ ಅಂದಿನ ಎಲ್ಲ ಆಚರಣೆಗಳನ್ನು ಅನುಸರಿಸಿ ಅದರಿಂದ ಅರಿವಿನ ಮಾರ್ಗ ಕಾಣದ್ದರಿಂದ ಅಸಾರವತ್ತಾಗಿದ್ದ ಆ ಎಲ್ಲ ಆಚರಣೆಗಳನ್ನು ತ್ಯಜಿಸಿ ತನ್ನ ಸಾಧನೆಯಿಂದ ಕಂಡುಕೊಂಡ, ದಾರ್ಶನಿಕತೆಯುಳ್ಳ ನೈತಿಕ ಮಾರ್ಗವೊಂದನ್ನು ಬುದ್ಧ ಆಯ್ದುಕೊಂಡ. ಅದನ್ನು ಆತ ಮಧ್ಯಮ ಮಾರ್ಗ ಎಂದು ಹೆಸರಿಸಿದನು.

ಭಿಕುಗಳಿಗೆ ಬುದ್ಧ ಪ್ರತಿಪಾದಿಸಿದ ಮಧ್ಯಮ ಮಾರ್ಗವು ಸಮ್ಯಗ್ ದೃಷ್ಟಿ, ಸಮ್ಯಗ್ ಸಂಕಲ್ಪ, ಸಮ್ಯಕ್ ವಾಕ್ಕು, ಸಮ್ಯಕ್ ಕರ್ಮ, ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ ಮತ್ತು ಸಮ್ಯಕ್ ಸಮಾಧಿ ಎಂಬ ಆರ್ಯ ಅಷ್ಟಾಂಗಿಕ ಮಾರ್ಗವೇ ತಥಾಗತನ ಮಧ್ಯಮ ಮಾರ್ಗವು.' ಗೌತಮ ಬುದ್ಧನು ಹಾಗೂ ಆತನ ಐದು ಜನ ಶಿಷ್ಯರೂ ಸೇರಿ ರೂಪಗೊಂಡದ್ದೇ ಮೊದಲ ಸಂಘವೆನಿಸಿತು. ಮುಂದೆ ಆ ಧರ್ಮವನ್ನು ಅಂಗೀಕರಿಸುವ ಜನ ಹೆಚ್ಚಾದಂತೆ ಸಂಘವು ವಿಸ್ತಾರಗೊಳ್ಳುತ್ತ ಬಂತು. ಬುದ್ಧ ಬಹುಮುಖ್ಯವಾಗಿಯೇ ಧಮ್ಮ ಹೇತುಪ್ಪಭವಾ ಯೇಸಂ ಹೇತುಂ ತಥಾಗತೋ ಅಹ ಮೇಸಂ ಚಯೋ ನಿರೋಧೋ ಏವಂ ವದಿ ಮಹಾಸಮನೋ' ಎಂದು ಸಾರಿದನು. ಹೀಗೆಂದರೆ

ಕಾರ್ಯಗಳು ಕಾರಣಗಳಿಂದ ಹುಟ್ಟುವುದು, ಆ ಕಾರಣಗಳನ್ನು, ಅವುಗಳ ನಿಗ್ರಹವನ್ನು ಸಾಧಿಸಲು ಸಾಧ್ಯವೆಂದು ಅರ್ಥ. ಬುದ್ಧನ ನಂತರದಲ್ಲಿ ನಿರ್ಮಿಸಿದ ಬೌದ್ಧ ಸ್ತೂಪಗಳ ಮೇಲೆ ಇದನ್ನು ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಗೌತಮ ಬುದ್ಧ ನಿರಂತರವಾಗಿ ನಲವತ್ತೈದು ವರ್ಷಗಳ ಕಾಲ ತಾನು ಕಂಡುಕೊಂಡ ಅರಿವನ್ನು ಜನಮಾನಸಕ್ಕೆ ತಲುಪಿಸುತ್ತ ಸಂಚರಿಸಿದನು. 'ತನ್ನ 79ನೆಯ ವಯಸ್ಸಿನ ಕೊನೆಗೆ ಬುದ್ಧನು ವೈಶಾಲಿಯಿಂದ ಶಿಷ್ಯರೊಂದಿಗೆ ಪ್ರಯಾಣಿಸುತ್ತ ಪಾವಾ ಎಂಬಲ್ಲಿಗೆ ತಲುಪಿದಾಗ ಅಲ್ಲಿ ಕಮ್ಮಾರನಾದ ಚುಂದನೆಂಬವನು ನೀಡಿದ ಸೂಕರಮರ್ದ್ದವವನ್ನು ಮೆದ್ದುದರ ಪರಿಣಾಮವಾಗಿ ಬುಸುಗುತ್ತಕ್ಕೆ ಒಳಗಾದನು. ಅಲ್ಲಿಂದ ಕುಸಿನಾರ (ಕುಶಿನಗರ) ದಾರಿಯಾಗಿ ಸಾಗುತ್ತ ಕಕುತ್ಥಾ ನದಿಯಲ್ಲಿ ಮಿಂದು ಬಳಿಕ ಅದರಾಚೆಯ ಮಲ್ಲರ ಸೀಮೆಗೆ ಸಾಗಿ, ಅಲ್ಲಿಯ ಹಿರಣ್ಯವತಿ ನದಿಯ ಈಚೆಯ ಬದಿಯ ಆಮ್ರವನವೊಂದರಲ್ಲಿ ಜೋಡಿ ಸಾಲವೃಕ್ಷದ ಕೆಳಗೆ ಬಲಮಗ್ಗುಲಾಗಿ ಉತ್ತರ ದಿಕ್ಕಿಗೆ ತಲೆಯಿಕ್ಕಿ ಮಲಗಿಕೊಂಡ, ಅಲ್ಲಿಯೇ ತನ್ನ ೮೦ನೆಯ ವಯಸ್ಸಿನಲ್ಲಿ ವೈಶಾಖ ಪೂರ್ಣಿಮೆಯಂದು ಕ್ರಿ.ಪೂ. 487ರಲ್ಲಿ ಪರಿನಿರ್ವಾಣ ಹೊಂದಿದ' ಎಂದು ಸಂಶೋಧಕರಾದ ತಾಳ್ತಜೆ ವಸಂತಕುಮಾರ ಅವರು ತಮ್ಮ ಕೃತಿಯಲ್ಲಿ ದಾಖಲಿಸುತ್ತಾರೆ.

ಬುದ್ಧನ ಸಂಘಪರಿಕಲ್ಪನೆಯು ತುಂಬ ಸರಳವಾದುದಾಗಿತ್ತು. ಸೈನಿಕರು, ದರೋಡೆ ಕೋರರು, ಜೀತದಾಳುಗಳು, ಸಾಂಕ್ರಾಮಿಕ ರೋಗಿಗಳು, ಮತಿಭ್ರಾಂತರು ಇಂತಹವರು ಮಾತ್ರ ಸಂಘದಲ್ಲಿ ಸೇರಲು ಅವಕಾಶವಿರಲಿಲ್ಲ. ಉಳಿದಂತೆ ಸಮಾಜದ ಯಾವುದೇ ಸ್ತರದ ಜನರು ಸಂಘದಲ್ಲಿ ಸೇರಬಹುದಿತ್ತು. ಹೀಗೆ ಮೊದಲು ಸಂಘದಲ್ಲಿ ಸೇರಿಸಿಕೊಳ್ಳುವದನ್ನು 'ಪಬ್ಬಜ್ಜಾ' (ಪ್ರವ್ರಜ್ಯಾ) ವಿಧಿ ಎಂದು ಹೆಸರಿನಿಂದ ಕರೆಯಲಾಗುತ್ತಿತ್ತು. ಅನೇಕ ದಿನಗಳ ತರಬೇತಿಯ ಅನಂತರದ ವಿಧಿಯನ್ನು 'ಉಪಸಂಪದಾ' ಎಂದು ಹೆಸರಿಸಲಾಗಿತ್ತು. ಆ ಮೂಲಕ ಸಂಘದ ನಿಯಮದಂತೆ ಭಿಕ್ಷುವಾಗುವುದು. ಇದನ್ನೇ ಉಪಸಂಪದಾ ಎನ್ನುವುದು. ಉಪಸಂಪದಾಕ್ಕೆ ಹೋಗುವವರು ಸಾಮಾನ್ಯವಾಗಿ 20 ವರ್ಷದವರಾಗಿರಬೇಕು. ಏಳು ವರ್ಷ ವಯಸ್ಸನ್ನು ಪೂರೈಸಿರುವವರು 'ಶ್ರಮಣೇರರು' ಎನಿಸಿಕೊಳ್ಳುತ್ತಾರೆ. ಸಾಧನೆಯ ಮೂಲಕ ಇಪ್ಪತ್ತು ವರ್ಷಕ್ಕೆ ತಲುಪಿದ ಇವರನ್ನು ಉಪಸಂಪದಾ ವಿಧಿಯ ಪ್ರಕಾರ ಭಿಕ್ಷುಗಳನ್ನಾಗಿ ಮಾಡಲಾಗುತ್ತದೆ. ಹೀಗೆ ಬುದ್ಧನ ಉಪದೇಶ ಶ್ರಮ ನಿರಂತರ ನಡೆದಿದ್ದಾಗ ಅನೇಕ ಜನ ಮಾರುಹೋಗಿ ತಮತಮಗನಿಸಿದ್ದನ್ನು ಸಂಘಕ್ಕೆ ದಾನವಾಗಿ ನೀಡಿದರು.' ರಾಜಗೃಹದ ಶ್ರೀಮಂತ ಅನಾಥ ಪಿಂಡಕನೆಂಬ ವರ್ತಕ ಶ್ರಾವಸ್ತಿಯಲ್ಲಿರುವ ತನ್ನ ಚೇತನವನವೆಂಬ ಉದ್ಯಾನವನ್ನು ಬುದ್ಧನ ವಾಸಕ್ಕಾಗಿ ಕೊಟ್ಟನು. ರಾಜ ಬಿಂಬಸಾರನು ತನಗಾಗಿ ಇದ್ದ ವೇಣುವನವೆಂಬ ಉದ್ಯಾನವನ್ನು ಬುದ್ಧನ ಸಂಘಕ್ಕೆ ದಾನಮಾಡಿದನು. ವಿಶಾಖೆಯೆಂಬ ಶ್ರೀಮಂತ ಹೆಣ್ಣುಮಗಳು ಉದ್ಯಾನ ವಿಹಾರಗಳನ್ನು ಮಾಡಿಸಿಕೊಟ್ಟಳು.' ಆಮ್ರಪಾಲಿ ತನ್ನ ಆಮ್ರವನವನ್ನು ಸಂಘಕಾಗಿ ನೀಡಿದಳು. ಹೀಗಿರುವ ಬೌದ್ಧಧರ್ಮ ಕ್ರಿ.ಪೂ. ೫೦೦ ರಿಂದ ಕ್ರಿ. ಪೂ. ೩೫೦ರ ಕಾಲಾವಧಿಯಲ್ಲಿ ಪೂರ್ವದಲ್ಲಿ ಚಂಪಾದಿಂದ ಪಶ್ಚಿಮದೆಡೆಗೆ ಶ್ರಾವಸ್ತಿಯವರೆಗೆ ಉತ್ತರದೆಡೆಗೆ ಕುರುಪಾಂಚಾಲದವರೆಗೆ, ದಕ್ಷಿಣದಲ್ಲಿ ಪ್ರತಿಷ್ಠಾನದವರೆಗೆ ಪ್ರಸರಿಸಿತ್ತು. ಕ್ರಿ.ಪೂ. ೩೫೦ ರಿಂದ ಕ್ರಿ.ಪೂ. ೧೦೦ರವರೆಗೆ ಬೌದ್ಧ ಧರ್ಮವು ಭಾರತದ ಎಲ್ಲೆಡೆಗೂ ವಿಸ್ತಾರವಾಗಿ ಹರಡಿಕೊಂಡಿತ್ತು. ಅಷ್ಟೇ ಅಲ್ಲದೆ ಸಿಂಹಳಕ್ಕೆ, ಪಶ್ಚಿಮದೆಡೆಗೆ ಗಾಂಧಾರದ ತನಕ ಹಾಗೆಯೇ ಹೊರದೇಶಗಳಲ್ಲಿಯೂ ತನ್ನ ದಾಂಗುಡಿಯನ್ನಿಟ್ಟಿತು. ಸಾಮ್ರಾಟ ಅಶೋಕನ ಪ್ರೋತ್ಸಾಹದಿಂದ ಕ್ರಿ.ಪೂ. ೩ ನೆಯ ಶತಮಾನದಲ್ಲಿ ಬೌದ್ಧ ಧರ್ಮದ ಹರವು ತುಂಬ ವಿಸ್ತಾರವಾಗಿತ್ತು. ಕಾಲಾಂತರದಲ್ಲಿ ಬೌದ್ಧ ಸಾಹಿತ್ಯವನ್ನು ಬೌದ್ಧ ಸಂಗೀತಿ ಗಳನ್ನು ನಡೆಸುವ ಮೂಲಕ ಸಂಗ್ರಹಿಸುವ ಕಾರ್ಯ ಆರಂಭವಾಯಿತು. ಮೂಲ ಪಾಲಿ ಭಾಷಾ ಬೌದ್ಧ ಸಾಹಿತ್ಯ ಹಾಗೂ ಸಂಸ್ಕೃತ ಭಾಷಾ ಬೌದ್ಧ ಸಾಹಿತ್ಯದ ಆಧಾರದಿಂದ ಬೌದ್ಧ ಸಾಹಿತ್ಯದ ಸ್ಪಷ್ಟ ಚಿತ್ರಣ ರೂಪಿಸಿಕೊಳ್ಳಬಹುದು ಎಂಬುದಕ್ಕೆ 'ನಮಗೆ ಈ ಕಾಲಕ್ಕೆ ಕೇವಲ ಪಾಲಿ ಸಾಹಿತ್ಯವಷ್ಟೇ ದೊರೆತು ಸಂಸ್ಕೃತ ಬೌದ್ಧ ಸಾಹಿತ್ಯ ಸಿಗದಿರುತ್ತಿದ್ದರೆ, ಬೌದ್ಧ ಧರ್ಮದ ಏಕಮುಖ ಪರಿಚಯವಷ್ಟೇ ಆಗುತ್ತಿತ್ತು. ಇದಕ್ಕೆ ಬದಲಾಗಿ ಒಂದು ವೇಳೆ ಪಾಲಿ ಸಾಹಿತ್ಯ ಪೂರ್ತಿ ನಷ್ಟವಾಗಿ ಬರಿಯ ಸಂಸ್ಕೃತ ಸಾಹಿತ್ಯ ಮಾತ್ರವೇ ಇದ್ದುದಾದಲ್ಲಿ ಬೌದ್ಧ ಧರ್ಮದ ವಿಕೃತ ಚಿತ್ರಣವಷ್ಟೇ ದೊರಕುತ್ತಿತ್ತು ಮತ್ತು ಬುದ್ಧನ ವ್ಯಕ್ತಿತ್ವ ಹಾಗೂ ಧರ್ಮೋ ಪದೇಶಗಳ ಸ್ಪಷ್ಟ ಸುಳುಹುಸಿಗುತ್ತಿರಲಿಲ್ಲ' ಎಂದು ವಿಂಟರನಿಟ್ಸ್ ಅಭಿಪ್ರಾಯ ಪಡುವುದುನ್ನು ತಾಳ್ತಜೆ ವಸಂತಕುಮಾರ ಅವರು ದಾಖಲಿಸುತ್ತಾರೆ.' ಅವರೇ ದಾಖಲಿಸಿರುವಂತೆ ಬೌದ್ಧ ಸಾಹಿತ್ಯ ಕೃತಿಗಳು ಈ ಕೆಳಗಿನಂತಿವೆ.

**ತಿಪಿಟಕ ಸಾಹಿತ್ಯ** – ವಿನಯ ಪಿಟಕ ಸುತ್ತಪಿಟಕ ಅಭಿಧಮ್ಮಪಿಟಕ, ಸುತ್ತವಿಭಂಗ ಖಂಧಕ ಪರಿವಾರಪಾಠ, ಮಹಾವಿಭಂಗ ಭಿಕ್ಕುನಿವಿಭಂಗ ಮಹಾವಗ್ಗ ಚುಲ್ಲವಗ್ಗ,

**ಸುತ್ತ ಪಿಟಕ (5 ನಿಕಾಯಗಳು)** – ಧೀಘ ಮಜ್ಝಿಮ ಸಂಯುಕ್ತ ಅಂಗುತ್ತರ ಖುದ್ದಕ, **'ಖುದ್ದಕ ನಿಕಾಯ'ದ ಒಳವಿಭಾಗಗಳು**: 1. ಖುದ್ದಕ ಪಾಠ, 2. ಧಮಪದ, 3. ಉದಾನ, 4. ಇತಿವುತ್ತ, 5. ಸುತ್ತನಿಪಾತ, 6.ವಿಮಾನವತ್ತು, 7. ಪೇತವತ್ತು, 8. ಥೇರಗಾಥಾ, 9. ಥೇರಿಗಾಥಾ, 10. ಜಾತಕ, 11. ನಿದೇಶ,12. ಪಟಸಂಚಿದಾ ಮಗ್ಗ, 13. ಅಪದಾನ 14. ಬುದ್ಧವಸಂ, 15. ಪರಿಯಾಪಿಟಕ.

**ಅಭಿದಮ್ಮ ಪಿಟಕ** – ಧಮ್ಮಸಂಘಣಿ ವಿಭಂಗ ಧಾತುಕಥಾ ಪುಗ್ಗಲ ಪಞತ್ತಿ ಕಥಾವತ್ತು ಯಮಕಪಠ್ಠನ ಪಕರಣ, ಹೀಗೆ ಪಾಲಿ ಬೌದ್ಧ ಸಾಹಿತ್ಯವು ಬೌದ್ಧ ಧರ್ಮ ಅಧಿಕೃತ ಸ್ವರೂಪ ಕಂಡುಕೊಳ್ಳುವ ದೃಷ್ಟಿಯಿಂದ ಗಮನಿಸಿದರೆ ಉಳಿದೆಲ್ಲ ಸಾಹಿತ್ಯ ಸೃಷ್ಟಿಯನ್ನು ಮೀರಿಸುವಂತಿದೆ, ಸಾಹಿತ್ಯವಾಗಿಯೂ ಶ್ರೇಷ್ಠವಾಗಿದೆ ಎಂದು ಭಾವಿಸುವಲ್ಲಿ ಎರಡಾಭಿಪ್ರಾಯ ಇರಲಾರದು. ಹೀಗೆ ಅಪಾರವಾದ ಬೌದ್ಧ ಸಾಹಿತ್ಯ ಬುದ್ಧ ಬದುಕಿದ್ದಾಗ ಬರೆದಿಡದಿದ್ದರೂ ಮೌಖಿಕ ವಾಗಿ ಅಪಾರವಾದ ಜೀವಂತಿಕೆಯಿಂದ ಚಲಾವಣೆಯಲ್ಲಿತ್ತು.

ಗೌತಮ ಬುದ್ಧನ ಪರಿನಿರ್ವಾಣದ ನಂತರ ಬೌದ್ಧಸಮ್ಮೇಳನಗಳು 'ಸಂಗೀತಿ' ಎಂಬ ಹೆಸರಿನಲ್ಲಿ ನಡೆದು ಅಲ್ಲಿ ಬುದ್ಧನ ಉಪದೇಶಗಳನ್ನು ಹಾಗೂ ಧರ್ಮದ ನಿಯಮಗಳನ್ನು ಸಂಗ್ರಹಿಸುವ ಕಾರ್ಯ ನಡೆಯುತ್ತಿತ್ತು. ಹಾಗೆ ಸಂಗ್ರಹಿಸಿದ್ದನ್ನು ಸಭೆಯಲ್ಲಿ ಚರ್ಚಿಸಿ ಸಂಕಲಿಸುವ ಕೆಲಸವೂ ನಡೆಯಿತು. ಈ ಸಂಗೀತಿಗಳ ಕುರಿತು ಪ್ರೊ. ಎಸ್.ಕೆ. ರಾಮಚಂದ್ರರಾವ ಅವರ 'ಬೋಧಿಯ ಬೆಳಕಿ ನಲ್ಲಿ' ಎಂಬ ಕೃತಿಯಲ್ಲಿ ವಿವರವಾದ ಮಾಹಿತಿಯನ್ನು ಕಾಣಬಹುದು.

ಬುದ್ಧನ ಪರಿನಿರ್ವಾಣದ ಮೂರು ತಿಂಗಳ ನಂತರ ಆತನ 500 ಜನ ಶಿಷ್ಯ ಭಿಕ್ಷುಗಳು ರಾಜಗೃಹದ ಸತ್ತಪನ್ನಿ ಎಂಬ ಗುಹೆಯಲ್ಲಿ ಸಭೆ ನಡೆಸಿ ಬುದ್ಧ ವಚನಗಳನ್ನು ನಿರ್ಧಿಷ್ಟವಾಗಿ ಸಂಗ್ರಹಿಸಿದರು. ಇಂದು ವಿನಯಪಿಟಕ ಎಂಬ ಪ್ರಸಿದ್ಧ ಬುದ್ಧ ವಚನವನ್ನು ಉಪಾಲಿ ಎಂಬ ಹಿರಿಯ ಭಿಕ್ಷು ಸಭೆಯ ಮುಂದೆ ಪಠಿಸಿದ. ಬುದ್ಧನೊಂದಿಗೆ ಕೊನೆಯವರೆಗೂ ಇದ್ದ ಆನಂದ ಸುತ್ತಪಿಟಕ ಹಾಗೂ ಅಭಿಧಮ್ಮಪಿಟಕಗಳನ್ನು ಸಂಗ್ರಹಿಸಿದನು. ಈ ಸಂಗೀತಿ ಸಭೆಯ ಅಧ್ಯಕ್ಷತೆಯನ್ನು ಶ್ರೇಷ್ಠಜ್ಞಾನಿಯಾಗಿದ್ದ ಮಹಾಕಶ್ಯಪ. ಇದಕ್ಕೆ ಪೋಷಕನಾಗಿದ್ದವನು ಮಗಧದ ಅರಸ ಅಜಾತಶತ್ರು. ಇದನ್ನು ಮೊದಲ ಸಂಗೀತಿ ಎಂದು ಹೆಸರಿಸಲಾಗುತ್ತದೆ. ಬುದ್ಧನ ಪರಿನಿರ್ವಾಣದ ನೂರು ವರ್ಷಗಳ ನಂತರ ವೈಶಾಲಿಯಲ್ಲಿ ಯಶನೆಂಬ ಅರ್ಹತ ಅನೇಕ ಹಿರಿಯ ಅರ್ಹತರನ್ನು ಕರೆದು ಎರಡನೆಯ ಸಂಗೀತಿಯನ್ನು ನಡೆಸಿದ. ಆಗ 700 ಜನ ಅರ್ಹತರು ಸೇರಿದ್ದರು. ಅನುಭವದಿಂದಲೂ, ವಯಸ್ಸಿನಿಂದಲೂ ತುಂಬ ಹಿರಿಯ ನಾಗಿದ್ದ ಸರ್ವ ಕಾಮಿಯೆಂಬ ಭಿಕ್ಷು ಸಭೆಗೆ ಸಾಕ್ಷಿಯಾಗಿದ್ದ. ರೇವತನೆಂಬುವನಿದ್ದನು. ಸಭಾಧ್ಯಕ್ಷ ಕಾಲಾಶೋಕನೆಂಬ ರಾಜ ಪೋಷಕನಾಗಿದ್ದನು.

ಕ್ರಿ.ಶ.ಪೂ. ಮೂರನೆಯ ಶತಮಾನದಲ್ಲಿ ಗೌತಮ ಬುದ್ಧನ ಪರಿನಿರ್ಮಾಣದ ಸು. 235ನೆಯ ವರ್ಷದಲ್ಲಿ ಪಾಟಲಿ ಪುತ್ರದಲ್ಲಿ ಸಾಮ್ರಾಟ ಅಶೋಕನ ಮುಂದಾಳ್ತವದಲ್ಲಿ ಮೂರನೆಯ ಮಹಾಸಂಗೀತಿಯು ಮೌದ್ಗಲ್ಯ ಪುತ್ರನೆಂಬುವನ ಅಧ್ಯಕ್ಷತೆಯಲ್ಲಿ ನಡೆಯಿತು. 9 ತಿಂಗಳ ಕಾಲ ನಡೆದ ಆ ಸಭೆಯಲ್ಲಿ ಸಾವಿರ ಜನ ಭಿಕ್ಷುಗಳು ಸೇರಿದ್ದರು. ಕಾಲಾಂತರದಲ್ಲಿ ಜನಜೀವನದಲ್ಲಿ ಬುದ್ಧ ಉಪದೇಶಿಸಿದ್ದ ಶೀಲ ಆಚಾರ ಕಡಿಮೆಯಾಗಿ ಅನಾಚಾರವೇ ಅತಿಯೆನಿಸಲಾರಂಭಿಸಿತ್ತು. ಇದನ್ನರಿತ ಅನೇಕ ಹಿರಿಯ ಅನುಭವಸ್ತ ಭಿಕ್ಷುಗಳು ಸೇರಿ ಸಿಂಹಳದಲ್ಲಿ ನಾಲ್ಕನೆಯ ಸಂಗೀತಿ ಯನ್ನು ಅಲ್ಲಿಯ ಮಲಯವೆಂಬ ಹಳ್ಳಿಯ ಗುಹೆಯಲ್ಲಿ ನೆರವೇರಿಸಲಾಯಿತು. ಈ ಸಂಗೀತಿಯ ಅಧ್ಯಕ್ಷತೆಯನ್ನು ರಕ್ಷಿತ ಮಹಾಥೇರನೆಂಬ ಹಿರಿಯ ವಹಿಸಿಕೊಂಡಿದ್ದ. ಅಲ್ಲಿಯ ಚಕ್ರವರ್ತಿ ವಟ್ಟಗಾಮನಿ ಅಭಯ ಈ ಸಭೆಯ ದಾತೃವಾಗಿದ್ದ. ಇಲ್ಲಿ ಲಿಖಿತವಾದ ಬುದ್ಧ ವಚನಗಳನ್ನು (ತಾಮ್ರಪಟದ ಮೇಲೆ) ನೂರು ಜನ ಭಿಕ್ಷುಗಳು ಪರೀಕ್ಷಿಸಿ ಅಂತಿಮಗೊಳಿಸಿದರು. ಮುಂದೆ ತಾಮ್ರ ಫಲಕಗಳು ಬಹುದಿನ ಬಾಳಿಕೆ ಬರಲಾರವು, ಭೌತಿಕ ವಾತಾವರಣದ ಪರಿಣಾಮದಿಂದ ಅಕ್ಷರಗಳು ಮಾಸಿಹೋಗಿ ತಪ್ಪುಗಳಾಗುವ ಸಾಧ್ಯತೆಯೇ ಹೆಚ್ಚು ಎಂದರಿತ ಅನುಭವಿ ಭಿಕ್ಷುಗಳು ಸೇರಿ ಕ್ರಿ.ಶ. 1871ರಲ್ಲಿ ಐದನೆಯ ಮಹಾಸಂಗೀತಿಯನ್ನು ಬರ್ಮಾ ದೇಶದಲ್ಲಿ ನಡೆಸಿದರು. ಐದು ತಿಂಗಳ ಕಾಲ ಅವಿಚ್ಛಿನ್ನವಾಗಿ ನಡೆದ ಈ ಸಭೆಯಲ್ಲಿ ಬುದ್ಧ ವಚನ ಗಳನ್ನು ಸಂಗ್ರಹಿಸಲಾಯಿತು.

ಬರ್ಮಾ ದೇಶದ ಅರಸ ಮಿಂಡಾನ್ ಶ್ರೇಷ್ಠ ಬೌದ್ಧ ಶ್ರದ್ಧಾಳು, ಮಹಾಪೋಷಕ. ಈ ಸಂಗೀತಿಯ ಅಧ್ಯಕ್ಷತೆಯನ್ನು ಜಗರಾಭಿವಂಶ ಮಹಾಥೇರನೆಂಬುವನು ವಹಿಸಿದ್ದನು. ಇಲ್ಲಿ ವಿನಯ ಪಿಟಕವನ್ನು 111 ಶಿಲಾಫಲಕಗಳ ಮೇಲೂ, 410 ಶಿಲಾಫಲಕಗಳ ಮೇಲೆ ಸೂತ್ರ ಪಿಟಕವನ್ನೂ, 208 ಶಲಾಫಲಕಗಳ ಮೇಲೆ ಅಭಿಧಮ್ಮ ಪಿಟಕವನ್ನು ಕೆತ್ತಿಸಲಾಯಿತು. ಬರ್ಮಾದೇಶದಲ್ಲಿ ಬೌದ್ಧಧರ್ಮ ದೇಶಧರ್ಮವಾಗಿ ಬೆಳೆದು ಬಂದಿದೆ. ನಿರ್ಧಿಷ್ಟವಾದ ಬುದ್ಧವಚನಗಳನ್ನು ಪುಸ್ತಕ ರೂಪದಲ್ಲಿ ಅಚ್ಚು ಹಾಕಿಸಿ ಪ್ರಸಾರಕ್ಕೆ ಮುಂದಾದರು. ಇದನ್ನು ಆರನೆಯ ಮಹಾ ಸಂಗೀತಿ ಎಂದು ಕರೆಯಲಾಗುತ್ತದೆ. ಬರ್ಮಾ ಸರಕಾರದ ಸಂಪೂರ್ಣ ಸಹಕಾರದೊಂದಿಗೆ ರಾಜಧಾನಿಯಾದ ರಂಗೂನ್‌ನಿಂದ ಎರಡು ಮೈಲಿ ದೂರದ 'ಕಬಾ ಅಯೆ' ಮಂದಿರದ ಬಳಿಯಲ್ಲಿ ಕೃತಕ 'ಮಹಾಪಾಶಾಣ' ಎಂಬ ಗುಹಾಮಂದಿರ ನಿರ್ಮಾಣವಾಯಿತು. ಅಲ್ಲಿ 1954ರ ಮೇ ತಿಂಗಳ 17ರಂದು ಈ ಆರನೆಯ ಮಹಾಸಂಗೀತಿಯು ನೆರವೇರಿತು. ಇದರ ಮಹಾನಾಯಕ ಬರ್ಮಾದ ರಾಷ್ಟ್ರಪತಿ ಉಬಾ ಪ್ರಧಾನಿ ಥಾಕಿನ್‌ನು, ಕೇಂದ್ರ ಮಂತ್ರಿಗಳು, ಶ್ರೇಷ್ಠ ನ್ಯಾಯಮೂರ್ತಿಗಳು ಮುಂತಾದ ಉಪಾಸಕರೆಲ್ಲ ಉಪಸ್ಥಿತಿರಿದ್ದರು. ಭದಂತ ನಾಗವಂಶನೆಂಬ ಭಿಕ್ಷುವು ಕಾರ್ಯಕ್ರಮ ನಿರೂಪಿಸಿದರು, ಅಧ್ಯಕ್ಷತೆಯನ್ನು ರೇವತ ಮಹಾಥೇರರು ವಹಿಸಿದ್ದರು. ಹೀಗೆ ಕಾಲಾಕಾಲಕ್ಕೆ ಬೌದ್ಧ ಸಾಹಿತ್ಯ ವಿವಿಧ ವಿದ್ವಾಂಸಭಿಕ್ಷುಗಳಿಂದ ಚಿಂತನ ಚರ್ಚೆಗಳ ಮೂಲಕ ಪರಿಸ್ಕಾರಗೊಳ್ಳುತ್ತಾ ಬಂದಿರುವುದನ್ನು ಕಂಡುಕೊಳ್ಳಬಹುದಾಗಿದೆ.

**ಬುದ್ಧಗುರುವಿನ ತತ್ವೋಪದೇಶ**

ಸಿದ್ದಾರ್ಥ ತನ್ನ ಇಪ್ಪತ್ತೊಂಭತ್ತನೆಯ ಆಯುಷ್ಯದಲ್ಲಿ ಮನೆಯನ್ನು ತೊರೆದು ಸತತ ಪರಿಶ್ರಮ ಪಟ್ಟು ಕೊನೆಗೆ ಬದುಕಿನ ಸತ್ಯವನ್ನು ಕಂಡುಕೊಂಡನು. ಜ್ಞಾನೋದಯವಾದಾಗ ಕಂಡುಕೊಂಡ ನಾಲ್ಕು ತತ್ವಗಳನ್ನೇ ಚತುರಾರ್ಯ ಸತ್ಯಗಳು ಹಾಗೂ ಅವುಗಳಲ್ಲಿ ಅಂತರ್ ಗತ ಗೊಂಡಿರುವ ಅಷ್ಟಾಂಗ ಮಾರ್ಗಗಳು. ಅವುಗಳನ್ನಿಲ್ಲಿ ಒಂದಷ್ಟು ವಿವರವಾಗಿ ಗಮನಿ ಸಬಹು ದಾಗಿದೆ. ಚತುರಾರ್ಯ ಸತ್ಯಗಳಲ್ಲಿ ಮೊದಲನೆಯದು, ಜೀವನ ದುಃಖಕರವಾಗಿದೆ. ಇದು ಮೊದಲ ಆರ್ಯಸತ್ಯ, ದುಃಖದ ನಿವಾರಣೆ ಹಾಗೂ ನಾಲ್ಕನೆಯದು ದುಃಖ ನಿವಾರಣೆ ಮಾರ್ಗ ಅಥವಾ ಅಷ್ಟಾಂಗ ಮಾರ್ಗ. ಜೀವನ ದುಃಖದಿಂದ ಕೂಡಿದೆ ಎನ್ನುವುದು ಮೊದಲನೆಯ ಸತ್ಯ ಜನನ, ವ್ಯಾಧಿ, ಮುಪ್ಪು, ಸಾವುಗಳು ದುಃಖವನ್ನುಂಟುಮಾಡುತ್ತವೆ. ಪ್ರಿಯರ ಅಗಲಿಕೆ ದುಃಖ, ಅಪ್ರಿಯರೊಂದಿಗೆ ಸೇರುವುದು ದುಃಖ, ಬಯಸಿದ್ದು ದಕ್ಕದಿದ್ದಾಗ ದುಃಖ, ಸಂಪತ್ತು ಸಾಲದೆಂಬ ದುಃಖ ಮನುಷ್ಯ ಬದುಕಿಗೆ ಆವರಿಸುತ್ತಿರುತ್ತದೆ ಅದುವೇ ದುಃಖ. ದುಃಖದ ಕಾರಣ ಎನ್ನುವುದು ಎರಡನೆಯ ಸತ್ಯ, ಮನುಷ್ಯನ ಮಿತಿಮೀರಿದ ಬಯಕೆಗಳೇ ದುಃಖದ ಹುಟ್ಟಿಗೆ ಕಾರಣ, ಅತಿಯಾದ ಇಂದ್ರಿಯ ಭೋಗಾಭಿಲಾಷೆ, ಧನದಾಶೆ, ಅಧಿಕಾರದ ಆಸೆ, ಕಂದಾಚಾರ, ಮೂಢನಂಬಿಕೆಗಳಿಗೆ, ಜೀವವಿರೋಧಿ ನಿಲುವುಗಳಿಗೆ ಜೋತುಬೀಳುವುದು ದುಃಖದ ಜನನಕ್ಕೆ ಕಾರಣವಾಗುತ್ತದೆ. ಹೀಗೆ ಉಂಟಾದ ದುಃಖದ ನಿವಾರಣೆ ಸಾಧ್ಯ ಎನ್ನುವುದು ಮೂರ ನೆಯ ಆರ್ಯಸತ್ಯ. ಮನುಷ್ಯನು ಅತಿ ಆಸೆಯನ್ನು, ದುರಾಸೆಗಳನ್ನು ತ್ಯಜಿಸುವುದರಿಂದ, ಬಂಧ ಮುಕ್ತರಾಗುವುದುರಿಂದ, ಅವುಗಳಿಂದ ಕಳಚಿಕೊಳ್ಳುವುದರಿಂದ ದುಃಖ ಪರಿಹಾರವಾಗುತ್ತದೆ. ಬುದ್ಧ ಉಪದೇಶಿಸಿದ ನಾಲ್ಕನೆಯ ಆರ್ಯ ಸತ್ಯ ದುಃಖ ನಿವಾರಣೆಗೆ ಮಾರ್ಗವಿದೆ ಎಂಬುದು. ಅದುವೇ ಅಷ್ಟಾಂಗ ಮಾರ್ಗ; 1. ಸಮ್ಯಕ್ ದೃಷ್ಟಿ, 2. ಸಮ್ಯಕ್ ಸಂಕಲ್ಪ, 3. ಸಮ್ಯಕ್ ವಚನ, 4. ಸಮ್ಯಕ್ ಕರ್ಮ, 5. ಸಮ್ಯಕ್ ಜೀವನ, 6. ಸಮ್ಯಕ್ ವ್ಯಾಯಾಮ, 7. ಸಮ್ಯಕ್ ಸ್ಮೃತಿ, 8. ಸಮ್ಯಕ್ ಸಮಾಧಿ.

**ಸಮ್ಯಕ್ ದೃಷ್ಟಿ ಎಂದರೆ;** ಸರಿಯಾದ ಯೋಚನೆ. ಜಗತ್ತು ಹೇಗಿದೆಯೋ ಹಾಗೆ ಪರಿ ಪೂರ್ಣ ವಾಗಿ ತಿಳಿದುಕೊಳ್ಳುವುದು. ಪೂರ್ವಾಗ್ರಹಗಳಿಂದ ಮುಕ್ತವಾಗಿರುವುದು. ಪಕ್ಷ ಪಾತವಿಲ್ಲದೆ, ಮೂಢನಂಬಿಕೆಗೆ ಒಳಗಾಗದೆ ವಿಚಾರವಂತಿಕೆಯಿಂದ ಅರಿತು ಕೊಳ್ಳುವುದು. ಪ್ರಪಂಚದಲ್ಲಿ ಯಾವುದೂ ಶಾಸ್ವತವಲ್ಲ, ಎಲ್ಲವೂ ದುಃಖದಾಯಕ ಹಾಗೂ ಅಸತ್ಯ ವಾದವುಗಳೆಂಬ ಮೂರು ಲಕ್ಷಣಗಳನ್ನು ಅರಿತುಕೊಳ್ಳುವುದು ಮೊದಲ ಸತ್ಯ. ಸಮ್ಯಕ ಸಂಕಲ್ಪ ಎಂದರೆ ಸರಿಯಾದ ಯೋಚನೆ, ಕಾಮ, ರಾಗ, ದ್ವೇಷ, ಹಿಂಸೆಗಳಿಂದ ಮುಕ್ತ ವಾದ ಯೋಚನೆಗಳಿರಬೇಕು. ಲೋಕ ಕಲ್ಯಾಣದ ಗುಣಗಳಿಂದೊಡಗೂಡಿರ ಬೇಕು. ಇದುವೇ ಸತ್ಯ ಅರಿಯಲು ಸನ್ಮಾರ್ಗವು.

**ಸಮ್ಯಕ್ ವಚನ ಎಂದರೆ;** ಸರಿಯಾದ ಮಾತು. ಸುಳ್ಳು ಹೇಳದಿರುವುದು, ಪರರನ್ನು ದೂಷಿಸದಿರುವುದು, ಚಾಡಿ ಹೇಳದಿರುವುದು, ಕೆಟ್ಟ ಮಾತುಗಳನ್ನಾಡ ದಿರುವುದು, ವ್ಯರ್ಥ ಹರಟೆ ಹೊಡೆಯದಿರುವುದು. ಹೀಗಿರುತ್ತ ದಯೆ, ಕರುಣೆ, ಮಮತೆ ಗಳಿಂದ ಕೂಡಿದ ಮಾತುಗಳಾಡ ಬೇಕು. ಹಿತ–ಮಿತವಾದ, ಸತ್ಯದಿಂದ ಕೂಡಿದ ಮಾತುಗಳನ್ನಾಡಬೇಕು.

**ಸಮ್ಯಕ್ ಕರ್ಮ ಎಂಬುದರ;** ಅರ್ಥ ಒಳ್ಳೆಯ ನಡತೆ ಪ್ರಾಣ ಹಾನಿ ಕಳ್ಳತನ, ವ್ಯಭಿಚಾರ ಮುಂತಾದವುಗಳಿಂದ ಮುಕ್ತವಾಗಿರಬೇಕು. ನಿತ್ಯವು ಜೀವಹಿತವಾದ ಕಾರ್ಯವನ್ನು ಮಾಡುತ್ತಿರಬೇಕು.

**ಸಮ್ಯಕ್ ಜೀವನ;** ಸರಿಯಾದ ಜೀವನ ಕ್ರಮ ಬದುಕಿನ ನಿರ್ವ ಹಣೆಗಾಗಿ ಕೆಟ್ಟ ಕೆಲಸಗಳನ್ನು ಮಾಡಬಾರದು. ಕುಶಲ–ಅಕುಶಲ ಕರ್ಮಗಳ ಅರ್ಥ ತಿಳಿದುಕೊಂಡಿರಬೇಕು. ಮೋಸ, ಮೋಡಿ ಮಾಡುವುದು, ಭವಿಷ್ಯ ಪವಾಡ ನಡೆಸುವದು, ಸಮಾಜ ಘಾತಕ ವ್ಯವಹಾರಗಳಲ್ಲಿ ತಪ್ಪಿಯೂ ತೊಡಗಬಾರದು. ಸತ್ಯಶುದ್ಧ ಜೀವನ ಕ್ರಮವನ್ನು ರೂಢಿಸಿಕೊಂಡಿರಬೇಕು.

**ಸಮ್ಯಕ್ ವ್ಯಾಯಾಮ;** ಎನ್ನುವುದೇ ಸರಿಯಾದ ಪ್ರಯತ್ನ. ಇದು ಮನುಷ್ಯ ಮನಸ್ಸಿಗೆ ಸಂಬಂಧಿಸಿದ್ದು. ಮನಸೇ ಎಲ್ಲಕ್ಕೂ ಮೂಲ. ಮನದಲ್ಲಿ ಮೂಡುವ ಕೆಟ್ಟ ಆಲೋಚನೆಗಳನ್ನು ಹೊರ ದೂಡಬೇಕು ಒಳ್ಳೆಯ ಆಲೋಚನೆಗಳನ್ನು ಮನನಿಸಬೇಕು. ಹಾಗೆ ಬಂದ ಒಳ್ಳೆಯ ಚಿಂತನೆ ಗಳನ್ನು ಪಾಲಿಸಿ ಪೋಷಿಸಬೇಕು. ಅದರಿಂದ ಇತರ ಜೀವಿಗಳಿಗೆ ಒಳ್ಳೆಯದಾಗುವಂತೆ ನೋಡಿ ಕೊಳ್ಳಬೇಕು.

**ಸಮ್ಯಕ್ ಸ್ಮೃತಿ**: ಸರಿಯಾದ ಜಾಗ್ರತ ಮನಸ್ಥಿತಿ. ವ್ಯಕ್ತಿ ತಾನು ಆಡುವ ಮಾತು, ಮಾಡುವ ಕೆಲಸ, ಅನುಭವಿಸುವ ಅನುಭವಗಳಲ್ಲಿ ಸದಾ ಜಾಗ್ರತಿಯಿಂದಿರಬೇಕು, ಎಂಥ ಸಂದರ್ಭ ಬಂದರೂ ಅತಿಯಾದ ಉದ್ವೇಗ, ಕೋಪ–ತಾಪಗಳಿಗೆ ಮನಸ್ಸನ್ನು ಹರಿಯ ಬಿಡಬಾರದು. ಶಾರೀರಿಕ, ಮಾನಸಿಕವಾಗಿ ಉಂಟಾಗುವ ಸುಖ, ದುಃಖಗಳೆಂಬ ವೇದನೆಗಳನ್ನು ತುಂಬ ಸಮಾಧಾನದಿಂದ ಗಮನಿಸುತ್ತ ಇಂದ್ರಿಯಗಳ ಸಡಿಲಿಕೆಯಿಂದ ಉಂಟಾಗುವ ದುಃಖಗಳಾವುವು, ಅವುಗಳ ನಿವಾರಣೆಗೆ ಮಾರ್ಗವೇನು ಎಂದು ಜಾಗ್ರತ ಮನಸ್ಸಿನಿಂದ ಕಂಡುಕೊಳ್ಳಲು ಪ್ರಯತ್ನಿಸಬೇಕು.

ಅಷ್ಟಾಂಗ ಮಾರ್ಗಗಳಲ್ಲಿ ಕೊನೆಯದು ಸಮ್ಯಕ್ ಸಮಾಧಿ, ಅಂದರೆ ಸರಿಯಾದ ಚಿತ್ತ ಏಕಾಗ್ರತೆ, ಸರಿಯಾದ, ಜೀವಪರವಾದ, ಕುಶಲವಾದ ಹಿತವನ್ನುಂಟುಮಾಡುವುದರ ಮೇಲೆ ಒಂದೇ ಮನಸ್ಸಿನಿಂದ ಧ್ಯಾನಿಸುತ್ತ ಮನಸ್ಸನ್ನು ಏಕತ್ರಗೊಳಿಸಲು ಪ್ರಯತ್ನಿಸುವುದು. ಲೋಭ, ಆಲಸ್ಯ, ಜಪತೆ, ದುಷ್ಟತನ, ಸಂಶಯ, ಅನಿಶ್ಚಿತತೆ ಎಂಬ ಸಂಕೋಲೆಗಳಿಂದ ಮುಕ್ತಗೊಳ್ಳ ಬೇಕಾದರೆ ಚಿತ್ತೈಕಾಗ್ರತೆಯಿಂದ ಧ್ಯಾನಿಸುವ ಅವಶ್ಯಕತೆಯಿದೆ. ಇದರಿಂದ ಶಾಂತಿ, ಸಮಾಧಾನ, ನೆಮ್ಮದಿ ಲಭಿಸುತ್ತದೆ. ಇದರಿಂದ ಜೀವಪರ ಕಲ್ಯಾಣ ಕಾರ್ಯ ಮಾಡುವ ಇಚ್ಛಾಶಕ್ತಿ ವೃದ್ಧಿಸುತ್ತದೆ.

ಹೀಗೆ ಸಾಧಿಸಿರುವ ಮನುಷ್ಯ ಮನಸ್ಸಿಗೆ ದುಃಖವೆಂಬುದೇ ಇಲ್ಲವಾಗುತ್ತದೆ ಎಂದು ಬುದ್ಧ ದಃಖ ನಿವಾರಣೆಯ ಮಾರ್ಗವನ್ನು ಕಂಡು ಹಿಡಿದನು ಅದನ್ನು ಜನಸಾಮಾನ್ಯರಿಗೆ ತಿಳಿಸಿದನು. ಇಷ್ಟಲ್ಲದೆ ಮನುಷ್ಯ ಬದುಕಿನ ನೆಮ್ಮದಿಗಾಗಿ, ಹಿತಕ್ಕಾಗಿ ಸುಖಕ್ಕಾಗಿ ಪಂಚಶೀಲಗಳನ್ನು ಸಾರಿದನು. ಅವುಗಳೇ, ಪ್ರಾಣಿ ಹಿಂಸೆ ಮಾಡಬಾರದು, ಕಳ್ಳತನ ಮಾಡಬಾರದು, ವ್ಯಭಿಚಾರ ಮಾಡಬಾರದು, ಸುಳ್ಳು ಹೇಳಬಾರದು, ಮಧ್ಯಪಾನ ಮಾಡಬಾರದು ಎಂಬವುಗಳು. ಹೀಗೆ ಗೌತಮ ಬುದ್ಧ ಜನಸಾಮಾನ್ಯರಿಗೆ ಅರ್ಥವಾಗಬಹುದಾಗಿದ್ದ, ಅಂದಿನ ಪರಿಸರದ ಆಡುಭಾಷೆಯೂ ಆಗಿದ್ದ ಪಾಲಿಯಲ್ಲಿಯೇ ಉಪದೇಶಿಸುತ್ತ ತನ್ನ ಧರ್ಮವನ್ನು ಪ್ರಚಾರ ಹಾಗೂ ಪ್ರಚಾರಗೊಳಿಸಿದನು. 'ಬುದ್ಧನು ತನ್ನ ಧರ್ಮದ ಪ್ರಚಾರಕ್ಕಾಗಿ ಭಿಕ್ಷುಗಳಿಗೆ ತರಬೇತಿ ಕೊಟ್ಟನು ಹಾಗೂ ಭಿಕ್ಷುಗಳ ಸಂಘವನ್ನು ಸ್ಥಾಪಿಸಿದನು. ಸಂಘವು ಜನರಿಗೆ ಹಿತವನ್ನು ಉಂಟು ಮಾಡ ಬೇಕು. ಲೋಕಸೇವೆ ನಿರಂತರವಾಗಿ ನಡೆಯುವಂತೆ ಅವನು ಭಿಕ್ಷು ಸಂಘವನ್ನು ಸ್ಥಾಪಿಸಿದನು ಹಾಗೂ 27 ನಿಯಮಗಳನ್ನು ರಚಿಸಿ, ಹಲವಾರು ನೀತಿ–ನಿಯಮಗಳನ್ನು ಕಡಾಯ ಗೊಳಿಸಿ ದನು–ತ್ರಿಪಿಟಕದಲ್ಲಿ ಒಂದಾದ ವಿನಯಪಿಟಕದಲ್ಲಿ ಈ ನಿಯಮಗಳ ಉಲ್ಲೇಖ ದೊರೆಯುತ್ತದೆ' ಎಂದು ಆದ್ಯರಂಗಾಚಾರ್ಯ ಅವರು ದಾಖಲಿಸುತ್ತಾರೆ.

ಗೌತಮ ಬುದ್ಧ ತಾನು ಕಂಡುಕೊಂಡ ಅರಿವನ್ನು ಹೀಗೆ ಜನಮಾನಸಕ್ಕೆ ತಲುಪಿಸುತ್ತ, ಅವರಲ್ಲಿ ಅರಿವನ್ನು ಮೂಡಿಸುತ್ತ ಉಳಿದ ಆಯುಷ್ಯವನ್ನು ಕಳೆದನು. ಅನೇಕ ರಾಜ–ಮಹಾ ರಾಜರು, ಸಾಮಾಂತ ಮಹಾಸಾಮಂತರು, ರೈತರು, ವೇಶ್ಯಯರು, ಕೂಲಿ ಕಾರ್ಮಿಕರು, ದರೋಡೆಕೋರರು, ಮಹಿಳೆಯರು ತಮತಮಗೆ ಆವರೆಗೆ ಬಂಧನಕ್ಕೀಡು ಮಾಡಿದ್ದ ಜಾತಿ ಸಂಕೋಲೆಗಳನ್ನು ಕಳಚಿಕೊಂಡರು. ಬುದ್ಧನಿಗೆ,

ಆತನ ಉಪದೇಶಕ್ಕೆ ಶರಣುಹೋದರು, ಭಿಕ್ಷು–ಭಿಕ್ಷುಣಿ ಯಾದರು, ಆಶ್ರಯ ದಾತರಾದರು. ಧರ್ಮ ಪ್ರಚಾರಕ–ಪ್ರಸಾರಕರಾದರು. ಬುದ್ಧನ ಉಪದೇಶದ ಉದೇಶವೇ 'ಬಹುಜನ ಹಿತಾಯ, ಬಹುಜನ ಸುಖಾಯ, ಲೋಕಾನು ಕಂಪಾಯವಾದ್ದರಿಂದ ಆತ ಅವರಿವರೆನ್ನದೆ ಸರ್ವರಿಗೂ ತನ್ನ ಉಪದೇಶಾಮೃತವನ್ನು ನೀಡಿದನು. 'ಸಿಗಾಲೋವಾದ ಸುತ್ತ (ಇದನ್ನು ಗೃಹಸ್ಥರ ವಿನಯ ಎಂದು ಕರೆಯುತ್ತಾರೆ)ದಲ್ಲಿ ಗಂಡ, ಹೆಂಡತಿ ಹಾಗೂ ಮಕ್ಕಳು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಬುದ್ಧ ಸವಿವರವಾಗಿ ಉಪದೇಶಿಸಿದ್ದಾನೆ. ಸಿಗಾಲ ಎಂಬ ತರುಣ ಗೃಹಸ್ತನಿಗೆ ಉಪದೇಶಿಸುತ್ತ ಬುದ್ಧ' ತಂದೆ, ತಾಯಿ, ಗುರು ಹಿರಿಯರನ್ನು ಗೌರವದಿಂದ ಕಾಣಬೇಕು. ಗಂಡ–ಹೆಂಡತಿಯನ್ನು ಪರಸ್ಪರ ಪ್ರೀತಿ ವಿಶ್ವಾಸದಿಂದರಬೇಕು. ಬಂಧು–ಮಿತ್ರರಲ್ಲಿ ಪ್ರಸನ್ನ ಹಾಗೂ ಉದಾರತೆಯಿಂದರಬೇಕು. ಭಿಕ್ಷುಗಳು ಹಾಗೂ

ಶ್ರಮಣರುಗಳಿಗೆ ಆದರಿಸಬೇಕು, ಆಳುಗಳಿಗೆ ಅವರ ಯೋಗ್ಯತೆಗೆ ತಕ್ಕ ಕೆಲಸ ಕೊಟ್ಟು ಸರಿಯಾದ ಸಂಬಳ, ಅನಾರೋಗ್ಯದ ವೇಳೆ ಔಷಧಗಳನ್ನು ಒದಗಿಸಬೇಕು, ಮಕ್ಕಳಿಗೆ ಉತ್ತಮ ನಡೆಯನ್ನು ಕಲಿಸಿಕೊಡಬೇಕು.

ಕೆಟ್ಟ ಕೆಟ್ಟ ಆಲೋಚನೆ, ಕ್ರಿಯೆಗಳಲ್ಲಿ ತೊಡಗದಿರಬೇಕು, ದೋಷ ಪೂರಿತ ಸಹವಾಸದಿಂದ ದೂರವಿರಬೇಕು. ಇಲ್ಲದಿದ್ದರೆ ವ್ಯಕ್ತಿ ತನ್ನ ಧನ, ಮಾನ–ಮರ್ಯಾದೆಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಬುದ್ಧ ಎಚ್ಚರಿಸುತ್ತಾನೆ. ಬುದ್ಧ ತಾನೆಲ್ಲಿಯೂ ದೇವರೆಂದಾಗಲಿ, ದೇವ ದೂತನೆಂದಾಗಲಿ, ತಾನೆ ಸರ್ವಶಕ್ತನೆಂದಾಗಲೀ ಹೇಳಿಕೊಳ್ಳುತ್ತಿಲ್ಲ. ಆತ ತಾನೊಬ್ಬ ಮಾರ್ಗದಾತನೇ ಹೊರತು ಮೋಕ್ಷದಾತನಲ್ಲ. ನನ್ನಂತೆ ಪ್ರತಿಯೊಬ್ಬರೂ ಪ್ರಯತ್ನಶೀಲರಾದರೆ ಬುದ್ಧರಾಗಲು ಸಾಧ್ಯ ಎಂದು ಸ್ಪಷ್ಟವಾಗಿ ಸಾರಿದನು.

**ಬುದ್ಧಗುರು ಎಂತಹ ವಿಚಾರ ಸ್ವಾತಂತ್ರ್ಯ ಪ್ರಿಯನಾಗಿದ್ದ ಎನ್ನುವುದಕ್ಕೆ ಆತ ಉಪದೇಶಿಸಿದ**: 'ನೀನು ಕೇಳಿದುದನ್ನೆಲ್ಲ ನಂಬಬೇಡ, ಸಂಪ್ರದಾಯ ಎಂದು ನಂಬಬೇಡ, ರೂಢಿಯಲ್ಲಿದೆ ಎಂದು ನಂಬಬೇಡ, ಬಹುಜನ ನಂಬುತ್ತಾರೆಂದು ನೀನು ನಂಬಬೇಡ, ಮಹರ್ಷಿಗಳು ಹೇಳಿದ್ದೆಂದು ನಂಬಬೇಡ, ಗುರು–ಹಿರಿಯರು ಹೇಳಿದರೆಂದು ನಂಬಬೇಡ, ನಾನು ಹೇಳಿದ್ದೆಂದು ನಂಬಬೇಡ. ಅದೆಲ್ಲವನ್ನು ಕೇಳಿ ಸ್ವತಃ ಪರಿಶೀಲಿಸಿ, ಪರೀಕ್ಷಿಸಿ, ವಿಶ್ಲೇಷಿಸಿದ ನಂತರ ಅದು ಸರ್ವರಿಗೂ ಒಳ್ಳೆಯದನ್ನು ಮಾಡುತ್ತದೆ, ವಿವೇಕಯುತವಾದದ್ದು, ಸರ್ವರಿಗೂ ಸುಖವನ್ನು, ಶಾಂತಿ–ನೆಮ್ಮದಿಯನ್ನು ನೀಡುವುದು ಎಂದು ನಿನಗೆ ಖಚಿತವಾದರೆ ಒಪ್ಪು, ನಂಬು ಅದರ ಮಾರ್ಗದರ್ಶನದಂತೆ ಬದುಕನ್ನು ರೂಢಿಸಿಕೋ' ಎಂಬಂತಹ ವೈಜ್ಞಾನಿಕ ಸತ್ಯದ ದಾರಿ ತೋರಿದವನು. ತುಂಬಾ ವೈಜ್ಞಾನಿಕ ನೆಲೆಯ ಜೀವಪರ ಚಿಂತನೆಯ, ಅಹಿಂಸಾ ಪರವಾದ ತತ್ವ ಸತ್ಯಗಳನ್ನು ಸಾರಿರುವುದರಿಂದ ಬೌದ್ಧಧರ್ಮ ಇಂದು ಭಾರತವರ್ಷೇ ಅಲ್ಲ ಜಗತ್ತಿನ ಬಹುರಾಷ್ಟ್ರಗಳ ಧರ್ಮವಾಗಿರುವುದು ಗಮನೀಯ. ಬುದ್ಧ ತೋರಿದ ದಾರಿಯಲ್ಲಿ ಬಹುಮುಖ್ಯವಾದವು ಆತ, ಆತನ ಧಮ್ಮ ಮತ್ತು ಸಂಘ. ಇವುಗಳಿಗೆ ತ್ರಿಸರಣ ಎಂದು ಬೌದ್ಧ ಜಗತ್ತಿನಲ್ಲಿ ಕರೆಯಲಾಗುತ್ತದೆ. 'ಇದು ಬುದ್ಧನ ಕಾಲದಲ್ಲಿ ರೂಢಿಯಲ್ಲಿತ್ತು. ಅದು ಪಾಲಿಭಾಷೆಯಲ್ಲಿದೆ';

**ಬುದ್ಧಂ ಸರಣಂ ಗಚ್ಛಾಮಿ** – (ನಾನು ಬುದ್ಧನಿಗೆ ಶರಣು ಹೋಗುತ್ತೇನೆ)

**ಧಮ್ಮಂ ಸರಣಂ ಗಚ್ಛಾಮಿ** – (ನಾನು ಧಮ್ಮಕ್ಕೆ ಶರಣು ಹೋಗುತ್ತೇನೆ)

**ಸಂಘಂ ಸರಣಂ ಗಚ್ಛಾಮಿ** – (ನಾನು ಸಂಘಕ್ಕೆ ಶರಣು ಹೋಗುತ್ತೇನೆ)

ಸಾಧಕರು, ಉಪಾಸಕರು ಈ ಮೂರು ಶರಣುಗಳನ್ನು ಮೂರು ಬಾರಿ ಉಚ್ಚರಿಸುವ ಮೂಲಕ ತಾವು ಬೌದ್ಧ ಧರ್ಮೀಯರೆಂದು ಘೋಷಿಸುತ್ತಾರೆ. ಇವು ಮೂರು ವಾಕ್ಯಗಳು ಬೌದ್ಧಧರ್ಮದ ಪವಿತ್ರವಾದ, ಅಮೂಲ್ಯವಾದ ಸಂಕೇತಗಳಾಗಿದೆ. ಇವುಗಳನ್ನು ಬೌದ್ಧರು ಒಪ್ಪಿಕೊಂಡು ಜೀವನ ಸಾಗಿಸಬೇಕು' ಎಂದು ಆದ್ಯ ರಂಗಾಚಾರ್ಯರು ವಿವರಿಸುತ್ತಾರೆ.

**ಗ್ರಂಥಋಣ**


1. **ಬುದ್ಧ ಮತ್ತು ಪರಂಪರೆ** – ಟಿ.ಎನ್. ವಾಸುದೇವಮೂರ್ತಿ
2. **ಧರ್ಮದಾನಿ ಬುದ್ಧ** – ಜಿ.ಪಿ. ರಾಜರತ್ನಂ
3. **ದೇವರ ರಾಜಕೀಯ ತತ್ವ** – (ಅನು) ಜಾಜಿ ದೇವೇಂದ್ರಪ್ಪ
4. **ಧಮ್ಮಪದಂ** – ಡಾ. ಶಿ.ಜೆ. ನಂದಿಮಠ
5. **ಮರಳಿ ಮನೆಗೆ** – ಮೂಡ್ನಾಕೂಡು ಚಿನ್ನಾಸ್ವಾಮಿ (ಸಂ)

೬. **ಧರ್ಮದಾನಿ ಬುದ್ಧ –** ಜೆ.ಪಿ. ರಾಜರತ್ನಂ
7. **ಬೌದ್ಧಾಯನ –** ತಾಳ್ತಜೆ ವಸಂತಕುಮಾರ
೮. **ಬೋಧಿಯ ಬೆಳಕಿನಲ್ಲಿ –**ಪ್ರೊ. ಎಸ್.ಕೆ. ರಾಮಚಂದ್ರರಾವ್